# ಹಂಪಿ ಟೈಮ್ಸ್

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 151 Issue: 151 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 15.12.2024 15.12.2024 • ಭಾನುವಾರ Sunday • ಪುಟ:04 Page:04 • ಬೆಲೆ:2 Rs:2



BOOK YOUR ADVERTISEMENTS
TO REACH MORE READERS
1,00,000+
Digital E-PAPER READERS
M: 94486 33038
Book Advance Get More Benefits



No.1 HAMPI TIMES LEADING VIJAYANAGARA District News Paper








ಸುದ್ದಿ, ಜಾಹೀರಾತು,
ಜಾಗೃತಿ ಪ್ರಕಟಣೆಗಳ ಪ್ರಕಟಣೆಗಾಗಿ
ಸಂಪರ್ಕಿಸಿ
ಮೊ: 9448633038
e-mail: hampitimes@gmail.com


ಉಜ್ಜಯನಿ ಪೀಠದಲ್ಲಿ ಸಾಮೂಹಿಕ ವಿವಾಹ | 6 ನವಜೋಡಿಗೆ ಶ್ರೀಗಳಿಂದ ಅಶೀರ್ವಚನ

## ಹೆಣ್ಣನ್ನು ಗೌರವಿಸುವ ಮನೆಗಳಲ್ಲಿ ಸದಾ ಆನಂದ ನೆಲೆಸುತ್ತದೆ : ಶ್ರೀಗಳು

### ಹೆಣ್ಣಿಗೆ ಗಂಡನ ಮನೆಯಲ್ಲಿ ತವರಿಗಿಂತ ಅಧಿಕ ಪ್ರೀತಿ ದೊರೆಯಲಿ



■ **ಹಂಪಿ ಟೈಮ್ಸ್ ಕೊಟ್ಟೂರು**

ನೂತನ ದಾಂಪತ್ಯ ಜೀವನಕ್ಕೆ ಕಾಲಿಟ್ಟ ನವಜೋಡಿಗಳು ಕುಟುಂಬದ ಗುರುಹಿರಿಯರ ಮಾರ್ಗದರ್ಶನದಲ್ಲಿ ಜೀವನಸಾಗಿಸಬೇಕು. ಹೆಣ್ಣು ತವರುಮನೆಗೆ ಹಾಗೂ ಗಂಡನ ಮನೆಗೆ ಕೀರ್ತಿ ತರುವ ನಿಟ್ಟಿನಲ್ಲಿ ನಡೆದುಕೊಳ್ಳಬೇಕು. ಕುಟುಂಬದ ಸದಸ್ಯರನ್ನು ತೊರೆದು ಬಂದ ಹೆಣ್ಣನ್ನು ಗಂಡ ಸೇರಿದಂತೆ ಎಲ್ಲರೂ ತವರು ಮನೆಗಿಂತ ಹೆಚ್ಚಿನ ಪ್ರೀತಿ ನೀಡಿದಾಗ ಮನೆಯಲ್ಲಿ ಶಾಂತಿ ನೆಮ್ಮದಿ ಶಾಶ್ವತವಾಗಿ ನೆಲೆಸಲಿದೆ ಎಂದು ಉಜ್ಜಿನಿ ಜಗದ್ಗುರು ಶ್ರೀ ಸಿದ್ದಲಿಂಗರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು ಆಶೀರ್ವಚನ ನೀಡಿದರು.

ತಾಲೂಕಿನ ಉಜ್ಜಿನಿ ಗ್ರಾಮದ ಕ್ಷೇತ್ರನಾಥ ಜಗದ್ಗುರು ಮರುಳಸಿದ್ದೇಶ್ವರ ಸ್ವಾಮಿಯ ಲಕ್ಷ ದೀಪೋತ್ಸವ ಹಾಗೂ ಸದ್ಧರ್ಮಸಿಂಹಾಸನಾಧೀಶ್ವರ ಲಿಂ|| ಮರುಳಸಿದ್ಧ ಶಿವಾಚಾರ್ಯ ಭಗವತ್ಪಾದರ 13ನೇ ವರ್ಷದ ಪುಣ್ಯ ಸಂಸ್ಮರಣೋತ್ಸವ ಕಾರ್ಯಕ್ರಮದ ಅಂಗವಾಗಿ ಶ್ರೀ ಪೀಠದ ಆವರಣದಲ್ಲಿ ತಮ್ಮ ಸಾನಿಧ್ಯದಲ್ಲಿ ನಡೆದ ಸಾಮೂಹಿಕ ಆರು ಜೋಡಿ ವಿವಾಹಗಳನ್ನು ನೆರವೇರಿಸಿ ಆಶಿರ್ವಚನ ನೀಡಿದರು.

ಮರುಳಸಿದ್ದೇಶ್ವರ ಸ್ವಾಮಿಯ ಕಾರ್ತಿಕೋತ್ಸವ, ಲಿಂ.ಮರುಳಸಿದ್ದರ ಪುಣ್ಯ ಸಂಸ್ಮರಣೋತ್ಸವ ಹಾಗೂ ವಿವಿದ ಮಠಾದೀಶರ ಸಮ್ಮುಖದಲ್ಲಿ ವಿವಾಹಿತರಾಗಿರುವ ತಾವುಗಳು ಪುಣ್ಯವಂತರು. ನಿಮ್ಮ ಮೇಲೆ ಲಿಂಗೈಕ್ಯ ಜಗದ್ಗುರುಗಳ ಆಶಿರ್ವಾದ ಸದಾ ಇರಲಿದೆ ಎಂದು ಆಶೀರ್ವದಿಸಿದರು.

ಈ ದಿನ ಲಿಂಗೈಕ್ಯ ಜಗದ್ಗುರುಗಳ ಗದ್ದುಗೆಯಲ್ಲಿ ಅಭಿಷೇಕ ಸೇರಿದಂತೆ ವಿವಿಧ ದಾರ್ಮಿಕ ಪೂಜಾ ಕೈಂಕಾರ್ಯಗಳು, ಪಠಣ ಗಳು ಶಾಸ್ತ್ರೋಕ್ತವಾಗಿ ನೆರವೇರಿದವು. ಈ ಸಂದರ್ಭದಲ್ಲಿ ಕಲಕೇರಿ ಶ್ರೀಗಳು, ನಾವದಗಿ ಶ್ರೀ ಗಳು, ದೇವರ ಹಿಪ್ಪರಗಿ ಶ್ರೀಗಳು, ಕುರವತ್ತಿ ಶ್ರೀಗಳು, ದಿಂಡದಹಳ್ಳಿ ಶ್ರೀಗಳು, ಶಿವಾಚಾರ್ಯರರು, ಗ್ರಾಮ ಪಂಚಾಯಿತಿ ಸಿಬ್ಬಂದಿ ವರ್ಗ, ಸೊಸೈಟಿ ಸಿಬ್ಬಂದಿ ವರ್ಗ, ಮಠದ ಸಿಬ್ಬಂದಿ ವರ್ಗದವರು ಸಾಮೂಹಿಕ ವಿವಾಹದಲ್ಲಿ ಉಪಸ್ಥಿತರಿದ್ದರು.

## ನಾಳೆ ಶ್ರೀ ಕೊಟ್ಟೂರುಸ್ವಾಮಿ ಮಠದಲ್ಲಿ ಕಾರ್ತಿಕೋತ್ಸವ, ಶಿವಾನುಭವ ಸಂಪದ

■ **ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಶ್ರೀಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನ ಮಠದಲ್ಲಿ ಡಿ.16 ರಂದು ಸೋಮವಾರ ಸಂಜೆ 7ಕ್ಕೆ ಶಿವಾನುಭವ ಸಂಪದ–1168, ಶ್ರೀ ಜಗದ್ಗುರು ಕೊಟ್ಟೂರೇಶ್ವರ ಕಾರ್ತಿಕ ಮಂಗಲಮಹೋತ್ಸವ ಜರುಗಲಿದೆ.


ಶ್ರೀ ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು ಸಾನ್ನಿಧ್ಯವಹಿಸಲಿದ್ದಾರೆ. ಗೌರವಾನ್ವಿತ ಮುಖ್ಯ ಅತಿಥಿಗಳಾಗಿ, ಸಹಕಾರ ರತ್ನ ಪುರಸ್ಕೃತರಾದ ಬಿಡಿಸಿಸಿ ಬ್ಯಾಂಕ ಅಧ್ಯಕ್ಷ ಕೆ.ತಿಪ್ಪೇಸ್ವಾಮಿ, ಬಳ್ಳಾರಿ ಜಿಲ್ಲಾ ಸಹಕಾರ ಯುನಿ ಯನ್ ನಿರ್ದೇಶಕ ಬಂಡೆ ರಂಗಪ್ಪ, ಉದ್ಯಮಿ ಒಂಟಿ ಪ್ರಕಾಶ, ಗೌರಿಗರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷ ಗೌಳಿ ರುದ್ರಪ್ಪ ಉಪಸ್ಥಿತರಿರಲಿದ್ದಾರೆ. ವಿಜಯನಗರ ಕಾಲೇಜಿನ ಪ್ರಾಧ್ಯಾಪಕ ಬಸವರಾಜ ಮೇಟಿ ಅವರು ವಚನಗಳಲ್ಲಿ ಮೌಲ್ಯಗಳು ಕುರಿತು ಉಪನ್ಯಾಸ ನೀಡಲಿದ್ದಾರೆ ಎಂದು ಸಂಸ್ಥಾನ ಮಠ ತಿಳಿಸಿದೆ.

> ಶ್ರೀ ಜಗದ್ಗುರು ಕೊಟ್ಟೂರೇಶ್ವರ ಕಾರ್ತಿಕ ಮಂಗಲಮಹೋತ್ಸವ


## ನಿವೇಶನ ಮಾರಾಟಕ್ಕಿದೆ

ಹೊಸಪೇಟೆ ತಾಲೂಕಿನ, ಡಣಾಯಕನಕರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನಂದಿಬಂಡಿ ಗ್ರಾಮದಲ್ಲಿ 3746 ಚ.ಅಡಿ. ವಿಸ್ತೀರ್ಣದ ಖಾಲಿ ನಿವೇಶನ ಮಾರಾಟಕ್ಕಿದೆ. ಖರೀದಿಸಲು ಇಚ್ಚಿಸುವವರು
ಸಂಪರ್ಕಿಸಿ
7972567022


## ಆನಂದ ಬಾಣ




## ಬಾಣಂತಿ ಸುಮಯ್ಯ ಮೃತರ ಕುಟುಂಬಕ್ಕೆ 5 ಲಕ್ಷ ರೂ. ಪರಿಹಾರ ಚೆಕ್ ವಿತರಣೆ

### ಮಗುವಿನ ಭವಿಷ್ಯಕ್ಕಾಗಿ ಸಹಾಯಧನವನ್ನು ಉಪಯೋಗಿಸಿ ಎಂದ ಶಾಸಕ ಎನ್.ಟಿ.ಶ್ರೀನಿವಾಸ್



■ **ಹಂಪಿ ಟೈಮ್ಸ್ ಕೂಡ್ಲಿಗಿ**

ಪಟ್ಟಣದ ಅಜಾದ್ ನಗರದ ನಿವಾಸಿಯಾದ ಅಬ್ದುಲ್ ರೆಹಮಾನ್ ಇವರ ಪತ್ನಿ ಸುಮಯ್ಯ ಅವರು ಬಳ್ಳಾರಿಯ ಜಿಲ್ಲಾ ಆಸ್ಪತ್ರೆಯಲ್ಲಿ ಇತ್ತೀಚೆಗೆ ಹೆರಿಗೆಯಾದ ನಂತರ ಬಹು ಅಂಗಾಂಗ ವೈಫಲ್ಯದಿಂದ ನಿಧನರಾಗಿದ್ದು. ಅವರಿಗೆ ಸರ್ಕಾರದಿಂದ ಪರಿಹಾರ ಹಣ 5ಲಕ್ಷ ರೂ. ಮೊತ್ತದ ಚೆಕ್‌ನ್ನು ಶಾಸಕ ಡಾ.ಎನ್.ಟಿ. ಶ್ರೀನಿವಾಸ್ ನೀಡಿದರು.

ಸಾಂತ್ವನ ಹೇಳಿದ ನಂತರ ಮಾತನಾಡಿದ ಶಾಸಕ, ಮಗುವಿನ ಭವಿಷ್ಯಕ್ಕಾಗಿ ಈ ಸಹಾಯಧನವನ್ನು ಉಪಯೋಗಿಸಿಕೊಳ್ಳಿ ಎಂದರು. ಮಗುವಿನ ಆರೈಕೆಗೆ ಈಗಾಗಲೇ ಕಿಟ್‌ನ್ನು ವಿತರಿಸಲಾಗಿದೆ. ತಾಯಿಯನ್ನು ಕಳೆದುಕೊಂಡು ಈ ಮಗುವನ್ನು ಚನ್ನಾಗಿ ನೋಡಿಕೊಳ್ಳುವುದರ ಮೂಲಕ ಭವಿಷ್ಯವನ್ನು ರೂಪಿಸಿ ತಾಯಿ ಸುಮಯ್ಯಅವರಿಗೆ ಆತ್ಮಕ್ಕೆ ಶಾಂತಿ ಕೋರುವಂತೆ ತಿಳಿಸಿದರು. ಈ ಸಂಧರ್ಬದಲ್ಲಿ ಪಪಂ ಸ್ಥಾಯಿ ಸಮಿತಿ ಅಧ್ಯಕ್ಷ ಸಯ್ಯದ್ ಶೂಕೂರ್, ಮಾದೇಹಳ್ಳಿ ನಜೀರ್, ವಕೀಲ ಬಷೀರ್ ಅಹಮ್ಮದ್, ಬ್ಯಾಂಕ್ ಷಫಿವುಲ್ಲಾ, ಇಂಜಿನಿಯರ್ ಜಿಲಾನ್ ಬಾಷ, ತಾಜ್ ಹೋಟೇಲ್ ಮುನ್ನಾ ಸೇರಿದಂತೆ ಇತರೆ ಕಾಂಗ್ರೆಸ್ ಮುಖಂಡರು ಇದ್ದರು.

## ಮರಿಯಮ್ಮನಹಳ್ಳಿಯಲ್ಲಿ ಪವಮಾನಹೋಮ, ಮಾಲಾವಿಸರ್ಜನೆ

■ **ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**

ಪ್ರಭು ಶ್ರೀರಾಮಚಂದ್ರನ ಪರಮಭಕ್ತ ಆಂಜ ನೇಯಸ್ವಾಮಿಯ ಹನುಮಮಾಲಾ ವ್ರತದ ಮಾಲಾವಿಸರ್ಜನೆ ಹಾಗು ಪವಮಾನಹೋಮ ಶುಕ್ರವಾರ ಪಟ್ಟಣದ ಆರಾಧ್ಯದೈವಗಳಾದ ಶ್ರೀಲಕ್ಷ್ಮೀನಾರಾಯಣಸ್ವಾಮಿ, ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ನಡೆಯಿತು.

ಹನುಮಮಾಲಾ ವ್ರತವು ವರ್ಷದಿಂದ ವರ್ಷಕ್ಕೆ ಹೋಬಳಿವ್ಯಾಪ್ತಿಯಲ್ಲಿ ಹೆಚ್ಚುತ್ತಿದ್ದು, ಯುವಕರಲ್ಲಿ ಧರ್ಮ, ಸಂಸ್ಕಾರ, ಭಕ್ತಿಯು ಹೆಚ್ಚುತ್ತಿರುವುದು ಸಾಕ್ಷಿಯಾಯಿತು.

ಈ ಬಾರಿ ಪಟ್ಟಣಸೇರಿದಂತೆ ಡಣಾಪುರ, ನಾಗಲಾಪುರ, ಗೊಲ್ಲರಹಳ್ಳಿ, ಚಿಲಕಹಟ್ಟಿ, ತಿಮ್ಮಲಾಪುರ, ನಂದಿಬಂಡಿ, ಅಯ್ಯನಹಳ್ಳಿ, ವ್ಯಾಸನಕೆರೆ, ಗರಗ, ಹನುಮನಹಳ್ಳಿ ಗ್ರಾಮಗಳಲ್ಲಿ ಈ ಬಾರಿ 4 ರಿಂದ 5ನೂರು ಭಕ್ತರು >>4




ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ದಿನಪತ್ರಿಕೆ ಇರಲಿ.
ಡಿ.ವಿ.ಜಿ.


## ಒಳ ಮೀಸಲಾತಿ ಜಾರಿಗಾಗಿ ತಮಟೆ ಚಳುವಳಿ

### ಆಯೋಗವನ್ನು ನಾಮಕೇ ವಾಸ್ತೆ ಘೋಷಣೆ | ಕಚೇರಿ, ಸಿಬ್ಬಂದಿ, ಹಣಕಾಸಿನ ನೆರವು ಕೊಟ್ಟಿಲ್ಲ | ಸರ್ಕಾರದ ವಿರುದ್ಧ ಅಕ್ರೋಶ


■ **ಹಂಪಿ ಟೈಮ್ಸ್ ಕೂಡ್ಲಿಗಿ**

ಸುಪ್ರೀಂಕೋರ್ಟ್ ತೀರ್ಪು ಗೌರವಿಸಿ, ಈ ಕೂಡಲೇ ಸರ್ಕಾರ ಒಳ ಮೀಸಲಾತಿ ಜಾರಿ ಮಾಡಬೇಕು, ಈ ಬಗ್ಗೆ ಸದನದಲ್ಲಿ ಶಾಸಕ ಎನ್.ಟಿ.ಶ್ರೀನಿವಾಸ್ ಧ್ವನಿ ಎತ್ತಬೇಕು ಎಂದು ಒಳ ಮೀಸಲಾತಿ ಜಾರಿಗಾಗಿ ಮಾದಿಗರ ಐಕ್ಯತಾ ಸಮಿತಿ ತಾಲೂಕು ಘಟಕದಿಂದ ಶನಿವಾರ ತಮಟೆ ಪ್ರತಿಭಟನೆ ನಡೆಸಿ ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಗೆ ಮನವಿ ಸಲ್ಲಿಸಿದರು.

ಇದೇ ಆಗಷ್ಟ್ ಒಂದರಂದು ಸುಪ್ರೀಂ ಕೋರ್ಟ್ ಒಳ ಮೀಸಲಾತಿ ಜಾರಿ ಮಾಡುವಂತೆ ಐತಿಹಾಸಿಕ ತೀರ್ಪು ನೀಡಿದೆ. ಹರಿಯಾಣ ಬಿಜೆಪಿ ಸರ್ಕಾರ ತೀರ್ಪು ಪ್ರಕಟವಾದ ಒಂದೇ ವಾರದಲ್ಲಿ ಮೀಸಲಾತಿ ಜಾರಿ ಮಾಡಿದೆ. ಆದರೆ ಕರ್ನಾಟಕದ ಕಾಂಗ್ರೆಸ್ ಸರ್ಕಾರದ ನಾಲ್ಕು ತಿಂಗಳು ಕಳೆದರು ಇನ್ನೂ ಮೀನ, ಮೇಷ ಮಾಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಸರ್ಕಾರ ನ್ಯಾಯಮೂರ್ತಿ ಜಗಮೋಹನ್ ದಾಸ್ ನೇತೃತ್ವದ ಆಯೋಗ ರಚಿಸಿದೆ. ಎರಡು ತಿಂಗಳಲ್ಲಿ ವರದಿ ಕೊಡುತ್ತದೆ ಎಂದು ಹಸಿ ಸುಳ್ಳು ಹೇಳಿತು. ಹೀಗೇ ಹೇಳಿ 45 ದಿನ ಕಳೆದರು ಆಯೋಗ ತನ್ನ ಕೆಲಸವನ್ನೆ ಆರಂಭಿಸಿಲ್ಲ, ಆಯೋಗವನ್ನು ನಾಮಕೇ ವಾಸ್ತೆ ಘೋಷಿಸಿದ್ದು ಬಿಟ್ಟರೆ, ಕಚೇರಿ ಇಲ್ಲ, ಸಿಬ್ಬಂದಿ, ಹಣಕಾಸಿನ ನೆರವು ಯಾವುದನ್ನು ಕೊಟ್ಟಿಲ್ಲ. ಅಧಿಕಾರ ಬಂದ ಮೊದಲ ಸಚಿವ ಸಂಪುಟದಲ್ಲಿಯೇ ಮೀಸಲಾತಿ ಜಾರಿ ಮಾಡುವುದಾಗಿ ಹೇಳಿದ ಕಾಂಗ್ರೆಸ್ ನಾಯಕರು. ಸಚಿವ ಸಂಪುಟದ ಸಭೆಯನ್ನು ಗೌಪ್ಯವಾಗಿ ಮಾಡಿ, ಆಮೆ ವೇಗದಲ್ಲಿ ಸಾಗುತ್ತಿರುವುದು ನೋಡಿದರೆ. ಈ ಸರ್ಕಾರಕ್ಕೆ ಅಸ್ಪೃಶ್ಯ ಸಮುದಾಯಗಳಿಗೆ ಒಳ ಮೀಸಲಾತಿ ನೀಡುವ ಮನಸ್ಸಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ದಲಿತರನ್ನು ಓಟ್ ಬ್ಯಾಂಕ್ ಮಾಡಿಕೊಂಡು ವಂಚಿಸುವುದು ಅಂಬೇಡ್ಕರ್, ಬಾಬು ಜಗಜೀವನ್‌ರಾಮ್ ಕಾಲದಿಂದಲೂ ಕಾಂಗ್ರೆಸ್ ಮೋಸ ಮಾಡಿಕೊಂಡು ಬಂದಿದೆ.

ಒಳ ಮೀಸಲಾತಿ ಜಾರಿ ಆಗುವವರೆಗೂ ಸರ್ಕಾರಿ ನೇಮಕಾತಿ ಮಾಡಬಾರದೆಂಬ ನಮ್ಮ ಬೇಡಿಕೆಗೆ ರಾಜ್ಯ ಸರ್ಕಾರ ಸಮ್ಮತಿಸುತ್ತಲೆ ಹಲವು ಇಲಾಖೆಗಳಲ್ಲಿ ನೇಮಕಾತಿ ಮಾಡುತ್ತಲೆ ಬಂದಿದೆ. ಆದ್ದರಿಂದ ಮಾದಿಗ ಸಮುದಾಯದ ಒಳ ಮೀಸಲಾತಿ ಬೇಡಿಕೆಗೆ ಈ ಚಳಿಗಾಲದ ಅಧಿವೇಶನದಲ್ಲಿ ತಾವು ಧ್ವನಿ ಎತ್ತಬೇಕು, ಬೇಡಿಕೆ ಈಡೇರಿಸಬೇಕು ಎಂದು ಮನವಿ ಪತ್ರದಲ್ಲಿ ಒತ್ತಾಯಿಸಿದರು. ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಮನವಿ ಸ್ವೀಕಾರ ಮಾಡಿದರು.

ಈ ಸಂದರ್ಭದಲ್ಲಿ ಮಾದಿಗ ಸಮುದಾಯದ ಪದಾಧಿಕಾರಿಗಳಾದ ಎಸ್.ದುರುಗೇಶ್, ಕಂದಗಲ್ ಕೆ ಪರಶುರಾಮ್, ಕುಮಾರ್ ಮಾಕನಡುಕು, ಸಾಲುಮನೆ ರಾಘವೇಂದ್ರ, ಡಿ.ಎಚ್. ದುರುಗೇಶ್, ಕರಿಬಸಪ್ಪ ಲೋಕಿಕೆರೆ, ಬಿ,ಮಹೇಶ, ಅಜಯ್, ಮುಗಪ್ಪ, ಹೊಸಹಳ್ಳಿ ಗಂಗಣ್ಣ, ಮಹೇಶ, ದುರುಗೇಶ ಬಡೇಲಡಕು, ಮಂಜಪ್ಪ ಮಾಳೆಹಳ್ಳಿ, ಓಬಳೇಶ್ ಕೆಂಚಮ್ಮನಹಳ್ಳಿ, ರುದ್ರಮುನಿ, ತಿಪ್ಪೇಹಳ್ಳಿ, ಸೇರಿದಂತೆ ಅನೇಕ ಮುಖಂಡರು ಹಾಗೂ ದಲಿತ ಸಂಘರ್ಷ ಸಮಿತಿಯ ಪದಾಧಿಕಾರಿಗಳು ಇದ್ದರು.




## ಓಪಿಎಸ್‌ಗಾಗಿ ಬೆಳಗಾವಿ ಚಲೋ ಹೋರಾಟದಲ್ಲಿ ಪಾಲ್ಗೊಳ್ಳಿ

■ **ಹಂಪಿ ಟೈಮ್ಸ್ ಕಂಪ್ಲಿ**

ಅಧಿವೇಶನದಲ್ಲಿ ಹಳೆಯ ನಿಶ್ಚಿತ ಪಿಂಚಣಿ (ಓ.ಪಿ.ಎಸ್)ಸೌಲಭ್ಯ ಕಲ್ಪಿಸುವಂತೆ ಆಗ್ರಹಿಸಿ, ಡಿ.17ರಂದು ಅನುದಾನಿತರ ನೌಕರರಿಂದ ಬೆಳಗಾವಿ ಚಲೋ ಹೋರಾಟ ಹಮ್ಮಿಕೊಂಡಿದೆ ಎಂದು ರಾಜ್ಯ ಅನುದಾನಿತ ಶಾಲಾ ಕಾಲೇಜುಗಳ ಪಿಂಚಣಿ ವಂಚಿತ ನೌಕರರ ಸಂಘದ ರಾಜ್ಯ ಸಹಕಾರ್ಯದರ್ಶಿ ಅಂಬಿಗರ ಮಂಜುನಾಥ ತಿಳಿಸಿದರು.



2006ರ ಪೂರ್ವ ಸೇವೆಗೆ ಸೇರಿ ಅನುದಾನಕ್ಕೊಳಪಟ್ಟಿರುವ ಹಾಗೂ 2006ರ ನಂತರ ಸೇವೆಗೆ ಸೇರಿ ಅನುದಾನದಕ್ಕೊಳಪಟ್ಟಿರುವ ಅನುದಾನಿತ ಶಾಲೆ ಕಾಲೇಜುಗಳ ನೌಕರರಿಗೆ, ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಭರವಸೆ ನೀಡಿದ ಹಳೆಯ ನಿಶ್ಚಿತ ಪಿಂಚಣಿ ಸೌಲಭ್ಯ ಕಲ್ಪಿಸಬೇಕಿದೆ. 2022ರ ಅ.7ರಿಂದ 2023ರ ಫೆ.27ರತನಕ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ 141ದಿನಗಳ ಹೋರಾಟ ನಡೆಸಿದ್ದು, ಈ ಹೋರಾಟದಲ್ಲಿ ನಿವೃತ್ತಿ ಹೊಂದಿದ ಶಿಕ್ಷಕರು ಜೀವ ಕಳೆದುಕೊಂಡಿದ್ದರೂ ಸರ್ಕಾರ ಅನುದಾನಿತ ನೌಕರರ ಬೇಡಿಕೆ ಆಲಿಸಲಿಲ್ಲ. ವಿರೋಧಪಕ್ಷದ ನಾಯಕರಾಗಿದ್ದ ಸಿದ್ಧರಾಮಯ್ಯ ತಮ್ಮ ಪಕ್ಷಕ್ಕೆ ಅಧಿಕಾರಕ್ಕೆ ಬಂದರೆ ಅನುದಾನರಹಿತ ಅವಧಿಯನ್ನು ಪರಿಗಣಿಸಿ ಪಿಂಚಣಿ ಸೌಲಭ್ಯ ನೀಡುವ ಭರವಸೆ ನೀಡಿದ್ದರು. ಮಾತು ಉಳಿಸಿಕೊಳ್ಳುವಲ್ಲಿ ಸಿಎಂ ಸಿದ್ಧರಾಮಯ್ಯ ಮುಂದಾಗುವಂತೆ ಒತ್ತಾಯಿಸಿ ಬೆಳಗಾವಿಯಲ್ಲಿ ಅಂತಿಮ ಗಡುವು ನೀಡಲು ಸುವರ್ಣಸೌಧದ ಮುಂಭಾಗದಲ್ಲಿ ಹಮ್ಮಿಕೊಂಡ ಹೋರಾಟದಲ್ಲಿ ಎಲ್ಲಾ ಸಂಘಟನೆಗಳ ನೌಕರರು, ಪಿಂಚಣಿ ವಂಚಿತ ನೌಕರರು ಹೋರಾಟದಲ್ಲಿ ಪಾಲ್ಗೊಳ್ಳುವಂತೆ ಶನಿವಾರ ಪತ್ರಿಕಾ ಪ್ರಕಟಣೆ ಮೂಲಕ ಕರೆ ನೀಡಿದರು.

# ಉತ್ತರ ಕರ್ನಾಟಕ ಭಾಗದಲ್ಲಿ 432 ನವೋದ್ಯಮಗಳ ನೋಂದಣಿ: ಸಚಿವ ಖರ್ಗೆ



**ಬೆಳಗಾವಿ ಸುವರ್ಣಸೌಧ:**
ಉತ್ತರ ಕರ್ನಾಟಕ ಭಾಗದಲ್ಲಿ ಉದ್ಯೋಗ ಸೃಷ್ಟಿಯ ಉದ್ದೇಶದಿಂದ ಬಿಯಾಂಡ್ ಬೆಂಗಳೂರು ಕಾರ್ಯಕ್ರಮದಡಿಯಲ್ಲಿ 432 ನವೋದ್ಯಮ ಉದ್ದಿಮೆಗಳು ಆರಂಭಕ್ಕೆ ನೋಂದಣಿಯನ್ನು ಮಾಡಿಕೊಂಡಿವೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಅವರು ಶುಕ್ರವಾರ ವಿಧಾನ ಪರಿಷತ್ತಿನಲ್ಲಿ ನಡೆದ ಉತ್ತರ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳ ಬಗ್ಗೆ ನಡೆದ ವಿಶೇಷ ಚರ್ಚೆ ಸಂದರ್ಭದಲ್ಲಿ ಉತ್ತರಿಸಿದರು. ಎಲೆಕ್ಟ್ರಾನಿಕ್ ವಸ್ತುಗಳ ತಯಾರಿಕೆ , ಹೊಸ ಆವಿಷ್ಕಾರಗಳನ್ನು ಮಾಡುವ ನಿಟ್ಟಿನಲ್ಲಿ 432 ನವೋದ್ಯಮ ಉದ್ದಿಮೆಗಳ ಆರಂಭಕ್ಕೆ ನೋಂದಣಿ ಮಾಡಿಕೊಂಡಿದ್ದು ಆ ಮೂಲಕ ಈ ಭಾಗದಲ್ಲಿ ಹೆಚ್ಚಿನ ಉದ್ಯೋಗ ಸೃಷ್ಟಿಯಾಗಲಿದ್ದು, ನಿಪುಣ ಕರ್ನಾಟಕ ಯೋಜನೆಯಡಿ ಕೂಡಾ ಈ ಭಾಗಕ್ಕೆ ಹೆಚ್ಚಿನ ಅವಕಾಶಗಳನ್ನು ನೀಡಲಾಗುತ್ತಿದೆ ಎಂದರು.

ಸದಸ್ಯ ಕೇಶವ ಪ್ರಸಾದ್ ಮಾತನಾಡಿ, ಉತ್ತರ ಕರ್ನಾಟಕ ಭಾಗದಲ್ಲಿ ಹಲವು ಐತಿಹಾಸಿಕ ಪ್ರಸಿದ್ಧ ದೇವಾಲಯಗಳಿದ್ದು ಇಲ್ಲಿ ಟೆಂಪಲ್ ಟೂರಿಸಮ್ ಅಭಿವೃದ್ಧಿ ಪಡಿಸಬಹುದು ಅಲ್ಲದೆ ಹೆಚ್ಚಿನ ಸಂಖ್ಯೆಯ ಅಣೆಕಟ್ಟುಗಳಿದ್ದು ಅವುಗಳ ಹಿನ್ನೀರಿನಲ್ಲಿ ಜಲ ಸಾಹಸ ಕ್ರೀಡೆಗಳನ್ನು ಆಯೋಜಿಸಬಹುದಾಗಿದೆ. ಕರಡಿಧಾಮ, ಪಕ್ಷಿಧಾಮ ಗಳಿದ್ದು , ರೋಪ್ ವೇ ಮೂಲಕ ಆಕರ್ಷಿಸಬಹುದಾದ ಸ್ಥಳಗಳಿದ್ದು,ರಸ್ತೆ, ರೈಲು ಮಾತ್ತು ವಾಯು ಮಾರ್ಗದ ವ್ಯವಸ್ಥೆಯಿದ್ದು ಇವೆಲ್ಲವುಗಳನ್ನು ಬಳಸಿಕೊಂಡು ಈ ಭಾಗವನ್ನು ಅಭಿವೃದ್ಧಿಗೊಳಿಸಬೇಕು ಎಂದರು.

ಸದಸ್ಯ ಎಂ. ನಾಗರಾಜ್ ಮಾತನಾಡಿ, ಈ ಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕೈಗಾರಿಕೆ ಗಳ ಸ್ಥಾಪನೆ ಆಗಬೇಕು, ನೀರಾವರಿ ಸಮಸ್ಯೆಗಳ ಬಗ್ಗೆ ಕೇಂದ್ರದ ಮೇಲೆ ಒತ್ತಡ ತಂದು ಬಗೆಹರಿಸಿಕೊಳ್ಳಬೇಕು ಎಂದರು.

**ಹಂಪಿ ಟೈಮ್ಸ್**
ವಿಜಯನಗರದ ಹೆಮ್ಮೆ
**ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ**
www.hampitimes.com
epaper.hampitimes.com

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು:**
**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

ಹನುಮ ಜಯಂತಿಯ ಪ್ರಯುಕ್ತ

# ಹನುಮನ ಯಶೋಗಾಥೆ ಸಾರುವ... ಸುಂದರಕಾಂಡದ ಪಕ್ಷಿ ನೋಟ

**ಅಂಜನಾ ನಂದನಂ ವೀರಂ**
**ಜಾನಕೀಶೋಕ ನಾಶನಂ**
**ಕಪೀಶ ಮಕ್ಷ ಹಂತಾರ**
**ವಂದೇ ಲಂಕಾ ಭಯಂಕರಮ್**



ಅಂಜನಿ ದೇವಿ ಮತ್ತು ವಾಯು ದೇವರ ಪುತ್ರ ಆಂಜನೇಯನು ಚೈತ್ರ ಶುದ್ಧ ಪೂರ್ಣಿಮೆಯ ದಿನ ಜನಿಸಿದನು. ಆಂಜನೇಯನ ಜೀವನವೇ ಒಂದು ಯಶೋಗಾಥೆ. ಮಹಾವೀರನಾದರೂ ವಿನಯ ಶೀಲ, ಅಷ್ಟಸಿದ್ದಿಗಳನ್ನು ಗಳಿಸಿದಾತ, ಬಲವಾನ, ರಾಮ ದೇವರ ಭಕ್ತ ರಾಮಭಂಟ ಹನುಮ. ಎಲ್ಲಿ ರಾಮನಿರುವನೋ ಅಲ್ಲೇ ಹನುಮನು ಎಲ್ಲಿ ಹನುಮನಿರುವನೋ ಅಲ್ಲೇ ರಾಮನು. ರಾಮನೆಡೆಗಿನ ಆಂಜನೇಯನ ಭಕ್ತಿ, ಶ್ರದ್ಧೆ, ನಂಬಿಕೆ ಅನನ್ಯ ಮತ್ತು ಅದ್ವಿತೀಯ.

ಶನಿವಾರದ ದಿನ ಪ್ರತಿ ಸಣ್ಣ ಹಳ್ಳಿಯಿಂದ ಹಿಡಿದು ಪಟ್ಟಣ, ನಗರ, ಮಹಾನಗರಗಳಲ್ಲಿ ಆಂಜನೇಯನನ್ನು ಪೂಜಿಸುತ್ತಾರೆ. ಹಳ್ಳಿಗಳಲ್ಲಂತೂ ಮುಂಜಾನೆ ಸ್ನಾನ ಮಾಡಿದ ಮಕ್ಕಳು, ಹಿರಿಯರು ಒಂದು ಪುಟ್ಟ ಲೋಟದಲ್ಲಿ ಕೊಂಚಎಣ್ಣೆಯನ್ನು, ಅದರಲ್ಲಿ ಬತ್ತಿಯನ್ನು ಹಾಕಿಕೊಂಡು ಎರಡು ಊದಿನ ಕಡ್ಡಿ ಕೈಯಲ್ಲಿ ಹಿಡಿದು ಹನುಮನ ಗುಡಿಗೆ ನಡೆಯುತ್ತಾರೆ. ಎಲ್ಲರಿಗೂ ಹನುಮನೆಂದರೆ ಅಷ್ಟು ಭಕ್ತಿ.... ತಮ್ಮನ್ನು ಕಾಡುವ ಎಲ್ಲಾ ರೀತಿಯ ದುಷ್ಟ ಗ್ರಹಗಳಿಂದ ವ್ಯಾಧಿಗಳಿಂದ ಹನುಮ ರಕ್ಷಿಸುತ್ತಾನೆ ಎಂಬ ಧೈರ್ಯ.

ದೇವರಾದ ಶ್ರೀರಾಮಚಂದ್ರನೇ ಹನುಮನನ್ನು ನಂಬುವನೆಂದರೆ ನಾವು ಸಾಮಾನ್ಯ ಜನರು ನಂಬದಿರುತ್ತೇವೆಯೇ!!

ಆಂಜನೇಯನ ಯಶೋಗಾಥೆಯನ್ನು ಕುರಿತು ವಾಲ್ಮೀಕಿಯು ತನ್ನ ರಾಮಾಯಣ ಮಹಾಕಾವ್ಯದಲ್ಲಿ "ಸುಂದರಕಾಂಡ" ಎಂಬ ಒಂದು ವಿಶೇಷ ಅಧ್ಯಾಯವನ್ನೇ ಬರೆದಿದ್ದಾನೆ. ವಾನರಸೇನೆಯ ನಾಯಕನಾದ ಸುಗ್ರೀವನನ್ನು ಶ್ರೀರಾಮಚಂದ್ರನು ಭೇಟಿಯಾದ ನಂತರ ವಾಲಿಯನ್ನು ವಧಿಸಿ ಸುಗ್ರೀವನಿಗೆ ರಾಜನಾಗಿ ಪಟ್ಟ ಕಟ್ಟಿದನು. ತದ ನಂತರ ಸೀತೆಯನ್ನು ಹುಡುಕಲು ನಾಲ್ಕು ದಿಕ್ಕುಗಳಿಗೆ ದೂತರನ್ನು ಕಳುಹಿಸಿದರು. ಹೀಗೆ ಕಳುಹಿಸಲ್ಪಟ್ಟವರಲ್ಲಿ ಆಂಜನೇಯನು ಒಬ್ಬ.... ಸೀತೆಯನ್ನು ರಾವಣನು ಕೊಂಡೊಯ್ಯುವಾಗ ರಾವಣನೊಂದಿಗೆ ಹೋರಾಡಿ ಮೃತಪಟ್ಟ ಪಕ್ಷಿ ಜಟಾಯುವಿನ ಸೋದರ ಸಂಪಾತಿಯಿಂದ ಸೀತೆಯುಅಪಹರಿಸಲ್ಪಟ್ಟುಸ್ವರ್ಣ ಲಂಕೆಯಲ್ಲಿಬಂಧಿಯಾಗಿರಬಹುದು ಎಂಬ ಆಧಾರದ ಮೇಲೆ ರಾಮ ತನ್ನ ನಂಬುಗೆಯ ಭಂಟ ಹನುಮನ ಕೈಯಲ್ಲಿ ಮುದ್ರೆಯುಂಗುರವನ್ನು ಕೊಟ್ಟು ಕಳುಹಿಸಿದನು.

ಚಿಕ್ಕವನಿದ್ದಾಗ ತನ್ನ ಅಸಾಧ್ಯ ತುಂಟತನದಿಂದ ವಿಪರೀತ ಕೀಟಲೆಗಳನ್ನು ಮಾಡುತ್ತಿದ್ದ ಹನುಮನು ತನ್ನ ಶಕ್ತಿ ಸಾಮರ್ಥ್ಯಗಳನ್ನು ಮರೆಯುವಂತಹ ಶಾಪವನ್ನು ಪಡೆದಿದ್ದನು. ಇದೀಗ ಆತನ ಸ್ನೇಹಿತ ಜಾಂಬವಂತನು ನೂರು ಯೋಜನ ವಿಸ್ತಾರವಾದ ಸಮುದ್ರವನ್ನು ದಾಟಿ ಸ್ವರ್ಣ ಲಂಕೆಗೆ ಹೋಗಲು ಬೇಕಾಗುವ ಸಾಮರ್ಥ್ಯವನ್ನು ತಮ್ಮ ಗುಂಪಿನಲ್ಲಿ ಕೇವಲ ಹನುಮ ಪಡೆದಿದ್ದಾನೆ ಎಂದು ಹನುಮನಿಗೆ ನೆನಪಿಸಿದ. ತನ್ನೆಲ್ಲಾ ನೆನಪುಗಳನ್ನು, ಶಕ್ತಿಯನ್ನು ಮತ್ತೆ ಪಡೆದ ಹನುಮನು ನೂರು ಯೋಜನ ವಿಸ್ತಾರವಾದ ಸಮುದ್ರವನ್ನು ದಾಟಿ ಸ್ವರ್ಣ ಲಂಕೆಯಲ್ಲಿ ಕಾಲಿಟ್ಟನು. ಹನುಮನು ಶಕ್ತಿಶಾಲಿ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಹನುಮನು ನಿರ್ಭೀತನು ಹೌದು. ಸಮುದ್ರವನ್ನು ದಾಟುವಾಗ ಮಾರ್ಗ ಪದ್ಯದಲ್ಲಿ ಆತನಿಗೆ ಲಂಕಿಣಿ, ಸಿ0ಹಿಣಿ ಎಂಬ ರಾಕ್ಷಸರನ್ನು ಎದುರಿಸಿ ಹತಗೊಳಿಸಿದನು. ಆತ್ಮವಿಶ್ವಾಸಕ್ಕೆ ಇನ್ನೊಂದು ಹೆಸರು ಈ ಪವನಸುತ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಒಂದೇ ಒಂದು ಕ್ಷಣವು ಗಲಿಬಿಲಿಗೊಳ್ಳದೆ, ಹೆಸರು ಕೇಳಿದ ಇಂದ್ರಾದಿ ದೇವತೆಗಳೇ ಹೆದರಿ ನಡುಗುತ್ತಿದ್ದ ರಾಕ್ಷಸೇಂದ್ರ ರಾವಣನನ್ನು ತಾನು ಭೇಟಿಯಾಗಲು ಅಪಾರ ಆತ್ಮವಿಶ್ವಾಸವನ್ನು ಹೊಂದಿದ್ದ ಹನುಮಂತ ಸಮುದ್ರವನ್ನು ಹಾರಿ ಆಚೆಯ ದಡದಲ್ಲಿದ್ದ ಸ್ವರ್ಣ ಲಂಕೆಯ

ಅಶೋಕವನದಲ್ಲಿ ಹೆದರಿದ ಆದರೆ ನಿಶ್ಚಲವಾಗಿ ಕುಳಿತ ಸೀತೆಯೊಂದಿಗೆ ಆರ್ಭಟಿಸುತ್ತಾ ಮಾತನಾಡುತ್ತಿದ್ದ ರಾವಣ ನನ್ನು ಕಂಡನು. ರಾವಣನ ನಿರ್ಗಮನದ ನಂತರ ಸೀತಾಮಾತೆ ತನ್ನನ್ನು ರಾವಣನ ಮಾಯಾ ರೂಪ ಎಂದು ಅನುಮಾನಿಸಬಹುದು ಎಂಬ ಶಂಕೆಯಿಂದ ಆಕೆಗೆ ತುಸುದೂರದಲ್ಲಿ ಕುಳಿತು ಮೆಲುದನಿಯಲ್ಲಿ ರಾಮಕಥೆಯನ್ನು ಹೇಳಲಾರಂಭಿಸಿದ. ಎಲ್ಲ ಕಥೆಯನ್ನು ಹೇಳಿದ ನಂತರ ನಿಧಾನವಾಗಿ ವಿನೀತ ಭಾವದಿಂದ ಸೀತಾಮಾತೆಯ ಮುಂದೆ ಕೈಮುಗಿದು ನಿಂತನು. ರಾಮನು ತನ್ನ ದೂತನ ಮುಖಾಂತರ ಸೀತಾಮಾತೆಗೆ ಕೊಟ್ಟ ಮುದ್ರೆಯುಂಗುರವನ್ನು ಆಕೆಗೆ ನೀಡಿ ಆಕೆಯ ಯೋಗ ಕ್ಷೇಮವನ್ನು ವಿಚಾರಿಸಿದನು. ಆಕೆಯ ಕ್ಷೇಮದ ಕುರಿತು ಪ್ರಭು ಶ್ರೀ ರಾಮನ ಕಳವಳವನ್ನು ವಿವರವಾಗಿ ವಿಷದ ಪಡಿಸಿದನು. ಸೀತಾಮಾತೆಯು ಅಪ್ಪಣೆ ನೀಡಿದರೆ ತಾನು ಆಕೆಯನ್ನು ತನ್ನ ಹೆಗಲ ಮೇಲೆ ಹೊತ್ತುಕೊಂಡೊಯ್ಯಬಲ್ಲೆ ಎಂದು ಆಕೆಗೆ ಮನವರಿಕೆ ಮಾಡಿಕೊಟ್ಟನು. ಆದರೆ ಸೀತಾಮಾತೆಯ ಇಚ್ಛೆಯಂತೆ ಪ್ರಭು ಶ್ರೀ ರಾಮನೇ ಆಕೆಯನ್ನು ರಾವಣನ ಕೈಯಿಂದ ಬಿಡಿಸಿಕೊಂಡು ಹೋಗಲಿ ಎಂಬ ನಿಸ್ವಾರ್ಥ ಮನೋಭಾವ ಹನುಮನದು. ಆತ ತನ್ನನ್ನು ತಾನು ರಾಮದೂತ, ರಾಮ ಭಂಟ ಎಂದು ಹೇಳಿಕೊಂಡನಲ್ಲದೆ ತಾನೋರ್ವ ಶೂರ, ವೀರ ಕಲಿ ಎಂದು ಹೇಳಿ ಕೊಳ್ಳಲಿಲ್ಲ. ತುಂಬಾ ನಿಷ್ಠೆ, ಸಂಯಮದಿಂದ ಆತ ನಡೆದುಕೊಂಡನು. ತಾಯಿಯ ಮುಂದೆ ಮಗ ಹೇಗೆ ಇರುತ್ತಾನೆಯೋ ಹಾಗೆಯೇ ವಿನಯ, ವಿಧೇಯತೆ ಮತ್ತು ಪ್ರಭು ಶ್ರೀ ರಾಮನೆಡಗಿನ ತನ್ನ ಭಕ್ತಿಯನ್ನು ಮಾತ್ರ ಹನುಮನು ವ್ಯಕ್ತಪಡಿಸಿದನು. ಮುಂದೆ ಸೀತಾಮಾತೆಯಿಂದ ಚೂಡಾಮಣಿಯನ್ನು ಪಡೆದುಕೊಂಡು ಹೊರಬಂದ ಹನುಮನು ಅಶೋಕ ವನದಲ್ಲಿದ್ದ ರುಚಿಕರ ಹಣ್ಣುಗಳನ್ನು ತಿಂದು ಹೊಟ್ಟೆ ತುಂಬಿಸಿಕೊಂಡನು.

ಆತನಿಗೊಂದು ಯುಕ್ತಿ ಹೊಳೆಯಿತು. ಅಶೋಕವನವನ್ನು ತಾನು ಧ್ವಂಸಗೊಳಿಸಿದರೆ ರಾವಣನ ಮುಂದೆ ತನ್ನನ್ನು ಹಾಜರುಪಡಿಸುತ್ತಾರೆ ಅಲ್ಲಿಗೆ ಆತನ ಸೈನ್ಯದ ಬಲಾಬಲಗಳ ಕುರಿತು ಮಾಹಿತಿ ದೊರೆಯುತ್ತದೆ ಎಂದು ಯೋಚಿಸಿ ಇಡೀ ಅಶೋಕವನದ ಗಿಡ ಮರಗಳನ್ನು ಧ್ವಂಸಮಾಡಲಾರಂಭಿಸಿದ. ಸೈನಿಕರು ನೂರಾರು ಸಂಖ್ಯೆಯಲ್ಲಿ ಬಂದು ಆತನನ್ನು ಎದುರಿಸಿ ಸೋತರು. ಮತ್ತೆ ಸಾವಿರಾರು ಸಂಖ್ಯೆಯ ಸೈನಿಕರನ್ನು ಆತ ಎದುರಿಸಿದನು. ಕೊನೆಗೆ ರಾವಣನ ಪುತ್ರ ಇಂದ್ರಜಿತನ ಕೈಗೆ ಸ್ವ ಇಚ್ಛೆಯಿಂದಲೇ ಸೆರೆ ಸಿಕ್ಕನು.

ಒಂದು ಪುಟ್ಟ ಕೋತಿ ಇಷ್ಟೆಲ್ಲಾ ಹಾಳು ಮಾಡಲು ಸಾಧ್ಯವೇ ಎಂಬ ಅನುಮಾನದಿಂದ ರಾವಣನ ಆಸ್ಥಾನಕ್ಕೆ ಆತನನ್ನು ಕರೆದು ತರಲು ರಾವಣನ ಮುಂದೆ ಪ್ರಭು ಶ್ರೀ ರಾಮನ ದೂತನಾಗಿ ನಿಂತನು ನಮ್ಮ ಹನುಮ. ಮುಂದೆ ರಾವಣನ ಆಣತಿಯಂತೆ ಲಂಕೆಯ ಸೈನಿಕರೆಲ್ಲ ಸೇರಿ ಆತನ ಬಾಲಕ್ಕೆ ಬಟ್ಟೆಯನ್ನು ಸುತ್ತಿ ಬೆಂಕಿ ಇಡಲು ಇಡೀ ಲಂಕೆಯನ್ನು ಬೆಂಕಿಯ ಆಹುತಿಯಲ್ಲಿ ಮುಳುಗಿಸಿದನು. ರಾವಣನ ಸೈನ್ಯದ ತಾಕತ್ತನ್ನು ತಿಳಿದುಕೊಳ್ಳಬೇಕೆಂಬ ಸ್ಪಷ್ಟ ಗುರಿ ಆತನಿಗಿತ್ತು. ಸಮುದ್ರ ತಟದಲ್ಲಿ ತನ್ನ ಬಾಲವನ್ನು ಅದ್ದುವಾಗ ಆತನಿಗೆ ರಾವಣನ ಸೋದರ ವಿಭೀಷಣನ ಭೇಟಿಯಾಯಿತು.

ಮುಂದೆ ಸಮುದ್ರ ಲಂಘನ ಮಾಡಿ ಪ್ರಭು ಶ್ರೀ ರಾಮನ ಮುಂದೆ ಎಲ್ಲವನ್ನು ವರದಿ ಒಪ್ಪಿಸಿದ ಹನುಮನು ತನ್ನೆಲ್ಲ ಕಪಿ ಬಾಂಧವರ ಮೆಚ್ಚುಗೆ, ಹೊಗಳಿಕೆಗಳಿಗೆ ಸ್ಥಿತಪ್ರಜ್ಞನಾಗಿದ್ದನು.

**ಇದು ಸುಂದರ ಕಾಂಡದ ಒಂದು ಪಕ್ಷಿ ನೋಟ.**

ಶಕ್ತಿ, ಯುಕ್ತಿ, ಆತ್ಮವಿಶ್ವಾಸ, ವಿನಯ, ವಿಧೇಯತೆ, ಸ್ಪಷ್ಟ ಗುರಿ,ನಿರ್ಭೀತ ಮತ್ತು ನಿಸ್ವಾರ್ಥಮನೋಭಾವ ಮತ್ತು ಸ್ಥಿತಪ್ರಜ್ಞನಾಗಿದ್ದ ಹನುಮ ಎಂದೆಂದಿಗೂ ರಾಮನ ಭಕ್ತನಾಗಿಯೇ ಉಳಿದನು. ಆದ್ದರಿಂದಲೇ ಆತನಿಗೆ ದೈವತ್ವ ಪ್ರಾಪ್ತಿಯಾಯಿತು. ಅಂತೆಯೇ ಶ್ರೀ ರಾಮನ ಭಕ್ತರೆಲ್ಲರಿಗೂ ಹನುಮ ದೇವರಾದನು.

ಆಂಜನೇಯ, ಪವನಪುತ್ರ, ಮಾರುತಿ, ಕಪೀಶ, ಹನುಮಾನ್ ಹನುಮಪ್ಪ, ಭಜರಂಗಿ ಎಂಬ ಹಲವಾರು ನಾಮಗಳಿಂದ ಕರೆಯಲ್ಪಡುವ ಆಂಜನೇಯನ ಕುರಿತು ಮಹಾನ್ ಆಂಜನೇಯ ಭಕ್ತರಾದ ಸಂತ ತುಳಸಿದಾಸರು ಹನುಮಾನ್ ಚಾಲೀಸಾವನ್ನು ರಚಿಸಿದರು. ಭಾರತ ದೇಶದ ಪ್ರತಿ ಹಳ್ಳಿಗಳಲ್ಲೂ ಹನುಮನ ದೇಗುಲವಿದೆ. ಹನುಮ ನಮ್ಮೆಲ್ಲಾ ಕಷ್ಟ ಕಾರ್ಪಣ್ಯಗಳನ್ನು ಕಳೆವ ದೈವವಾಗಿ ಜನಮನದಲ್ಲಿ ಸದಾ ನೆಲೆಸಿದ್ದಾನೆ.

**"ಬುದ್ಧಿರ್ಬಲಮ್ ಯಶೋಧೈರ್ಯರ್ಂ ನಿರ್ಭಯತ್ವಂ ಮರೋಗತಃ**
**ಅಜಾಡ್ಯಮ್ ವಾಕ್ಪಟುತ್ವಂಚ**
**ಹನುಮದ ಸ್ಮರಣಾದ್ಭವೇತ್**

ಹನುಮ ಜಯಂತಿಯ ಈ ಶುಭ ಸಂದರ್ಭದಲ್ಲಿ ನಾವೆಲ್ಲರೂ ಆತನನ್ನು ಪೂಜಿಸಿ ಕೃಪೆಗೆ ಪಾತ್ರರಾಗೋಣ.

# ಅಮ್ಮನ ಆರೈಕೆಗೆ ನಿವೃತ್ತಿ ನಂತರ ಭಾರತದಲ್ಲೆ ಉಳಿದ ಪುತ್ರ

ಎಳೆಂಟು ವರ್ಷಗಳ ಹಿಂದೆ, ಆಗಾಗ ಮಗಳ ಮನಿಗೆ ಬೆಂಗಳೂರಿಗೆ ಹೋಗುತ್ತಿದ್ದೆ. ಅವರ ಮನೆಯಿರುವುದು ಪದ್ಮನಾಭ ನಗರದ ಕೊನೆಯ ಸಿ.ಟಿ. ಬಸ್ ಸ್ಟಾಪ್ ಹತ್ತಿರ, ಸಮಯ ಕಳೆಯಲು ನಾನು ಆಗ ಬಸ್ ಸ್ಟಾಪಿನಲ್ಲಿ ಹೋಗುತ್ತಿದ್ದೆ ಅಲ್ಲಿಗೆ ಹೋದಾಗಲೆಲ್ಲ ನೀಳವಾದ ಕಾಯ,ಶುಭ್ರವಾದ ಬಟ್ಟೆ,ಗಂಭೀರವಾದ ಮುಖ ಭಾವ, ಸುಮಾರು ಅರವತ್ತು ಅರವತ್ತೈದು ಆಸುಪಾಸು ಇರುವ ವ್ಯಕ್ತಿಯೊಬ್ಬರು ಅಲ್ಲಿ ಅವರು ಒಬ್ಬರೆ ಕೂತಿರುತ್ತಿದ್ದರು. ಅಲ್ಲಿ ಐದಾರು ಜನ ಕುಳಿತು ಹರಟೆ ಹೊಡೆಯುತ್ತಿದ್ದರೂ ಅವರೊಂದಿಗೆ ಬೆರೆಯುತ್ತಿರಲಿಲ್ಲ.

ಒಂದು ಸಲ ಬಸ್ ಸ್ಟ್ಯಾಂಡಿನಲ್ಲಿ ಒಬ್ಬರೆ ಕುಳಿತಿದ್ದರು , ನನಗೆ ಕುತೂಹಲ ತಡೆಯದೆ ಅವರ ಹತ್ತಿರ ಕುಳಿತೆ, ಸ್ವಲ್ಪ ಸಮಯದ ನಂತರ ನಾನೆ ಮಾತಾಡಿದೆ.

ತಾವು ಇದೆ ಊರಿನವರಾ? ಸರ್ ಎಂದೆ.

ನಮ್ಮದು ಕಾರವಾರ ಹತ್ತಿರದ ಒಂದು ಹಳ್ಳಿ ,ನಾನು ಕೆನರಾ ಬ್ಯಾಂಕಿನಲ್ಲಿ ಮ್ಯಾನೆಜರ್ ಆಗಿ ಸೇವೆ ಸಲ್ಲಿಸಿ ಇಲ್ಲಿಯೇ ವಾಸವಾಗಿದ್ದೇನೆ.

ಮಕ್ಕಳು ಏನು ಮಾಡ್ತಿದ್ದಾರೆ ಸರ್?

ನನಗೆ ಒಬ್ಬನೆ ಮಗ, ಅವನು ಅಮೇರಿಕಾದಲ್ಲಿದ್ದಾನೆ ಅವನಿಗೆ ಅಲ್ಲಿ ಕೈ ತುಂಬಾ ಸಂಬಳ ನನ್ನ ಶ್ರೀಮತಿಯವರು ಮಗನೊಂದಿಗೆ ಅಮೇರಿಕಾದಲ್ಲಿದ್ದಾರೆ.

ನೀವು ಅವರೊಂದಿಗೆ ಹೋಗಿದ್ದರೆ ಚೆನ್ನಾಗಿತ್ತು ಸರ್.



ಅದು ದೊಡ್ಡ ಕತೆ ನನ್ನ ತಮ್ಮನು ಇದೆ ಬೆಂಗಳೂರಿನಲ್ಲಿದ್ದಾನೆ, ಅವನು ನನ್ನಂತೆ ಬ್ಯಾಂಕಿನ ಉದ್ಯೋಗಿ ಅವನ ಹೆಂಡತಿ ಬ್ಯಾಂಕ್ ಉದ್ಯೋಗಿ ಅವನಿಗೆ ಎರಡು ಮಕ್ಕಳು ಚಿಕ್ಕ ಮಕ್ಕಳು ಅವರು ಓದುತ್ತಿದ್ದಾರೆ, ನಮ್ಮ ತಾಯಿಯವರು ನನ್ನ ತಮ್ಮನ ಮನೆಯಲ್ಲಿದ್ದಾರೆ ಅವರು ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದಾರೆ, ನನ್ನ ತಾಯಿ ನನ್ನ ತಮ್ಮನ ಮನೆ ಬಿಟ್ಟು ಬರಲಾರಳು, ನನ್ನ ಮಗ ಕರೆದರೂ ನಮ್ಮಮ್ಮ ಬರಲು ಒಪ್ಪಲಿಲ್ಲ ಹೀಗಾಗಿ ನಮ್ಮ ಅಮ್ಮನ ಆರೈಕೆ ಮಾಡಲು ನನ್ನ ತಮ್ಮನ ಮನೆಯಲ್ಲಿಯೇ ಉಳಿದುಕೊಂಡೆ. ನಮ್ಮ ತಮ್ಮನ ಮಕ್ಕಳನ್ನು ಶಾಲೆಗೆ ಕಳಿಸುವುದು ಮತ್ತು ಕರೆದುಕೊಂಡು ಬರುವುದು ನನ್ನದೆ ಕೆಲಸ, ನಮ್ಮ ತಾಯಿಯ ಊಟೋಪಚಾರ , ಔಷಧಿ ಕೊಡುವುದು ಎಲ್ಲಾ ನನ್ನದೆ ಕೆಲಸ. ಮನೆಯಲ್ಲಿ ಅಡುಗೆ ಮಾಡಲು ಒಂದು ಆಳು ಇದೆ ,ಏನೇನು ಅಡುಗೆ ಬೇಕೋ ಅದನ್ನು ಮಾಡಿಟ್ಟು ಹೋಗುತ್ತಾರೆ. ಸಾಯಂಕಾಲ ಮತ್ತೆ ಅಡುಗೆ ತಯ್ಯಾರಿ ಮಾಡಲು ಸಾಯಂಕಾಲ ಬರುತ್ತಾರೆ.ನಮ್ಮ ತಮ್ಮ ತಮ್ಮನ ಹೆಂಡತಿ ಸಾಯಂಕಾಲ ಮನೆಗೆ ಬರುತ್ತಾರೆ. ನನ್ನ ತಮ್ಮನ ಮಕ್ಕಳ ಶಾಲೆ ಇಲ್ಲಿಯೇ ಸಮಿಪದಲ್ಲಿ ಇದೆ ಅವರನ್ನು ಶಾಲೆಗೆ ಕಳುಹಿಸಿ ಈ ಬಸ್ ಸ್ಟ್ಯಾಂಡಿನಲ್ಲಿ ಸ್ವಲ್ಪ ಹೊತ್ತು ಕುಳಿತುಕೊಂಡು ಮನೆಗೆ ಹೋಗುತ್ತೇನೆ, ಮತ್ತೇ ಮಕ್ಕಳನ್ನು ಕರೆದುಕೊಂಡು ಹೋಗುವ ಮುಂಚೆ ಸ್ವಲ್ಪವು ಹೊತ್ತು ಕುಳಿತುಕೊಂಡು ಮಕ್ಕಳನ್ನು ಕರೆದುಕೊಂಡು ಮನೆಗೆ ಹೋಗುತ್ತೇನೆ. ಇದು ನನ್ನ ದೈನಂದಿನ ಕೆಲಸ. ನಮ್ಮ ಮನೆಯವರು ಮಗನ ಸಲುವಾಗಿ ಅಮೇರಿಕಾಗೆ ಹೋದರು, ನಾನು ನನ್ನ ತಾಯಿಯ ಸಲುವಾಗಿ ಭಾರತದಲ್ಲೆ ಉಳಿದುಕೊಂಡಿರುವೆ.

ನಿವೃತ್ತಿ ಜೀವನ ಹೇಗೋ ಕಳೆಯುತ್ತಿದೆ, ದೇವರು ಇಚ್ಛೆಯಂತೆ ಜೀವನ ಎಂದು ನಿಟ್ಟುಸಿರು ಬಿಟ್ಟರು. ಒಬ್ಬೊಬ್ಬರ ಜೀವನ ಒಂದೊಂದು ರೀತಿ. ನಾನು ಮನೆಕಡೆ ಹೊರಟೆ, ಅವರು ಹೊರಟರು.

**■ ಚಂದ್ರಶೇಖರಯ್ಯ ರೋಣದಮಠ., ಹೊಸಪೇಟೆ**

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No. 15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಚದುರಂಗದ ನೂತನ ದೊರೆ



ಚದುರಂಗದಾಟದಲಿ
ಹದಗೊಂಡು ಜಾಣ್ಮೆಯಲಿ
ಕದಲದಿಹ ಚಿತ್ತದಲಿ ಸೆಣಸುತಿದ್ದು
ಎದುರಾಳಿ ಚೈನದವ
ಮುದುಡಿದನು ನಿನ್ನೆದುರು
ಮುದವಿತ್ತೆ ಭಾರತಕೆ ನೀನು ಗೆದ್ದು

ಕೆಲವಾರು ವರ್ಷಗಳ
ಛಲಕಿಂದು ಜಯ ದೊರೆತು
ಫಲಿಸಿತದು ದೊರೆ ನೀನು ಚದುರಂಗಕೆ
ತಲೆಯೆಲ್ಲ ಆಟದಲಿ
ಬಲವಂತ ಜಾಣ್ಮೆಯಲಿ
ಒಲಿದಳದೊ ಜಯಲಕ್ಷ್ಮಿ ನಿನ್ನಾಟಕೆ

ಗಳಿಸಿರುವ ವಿಜಯವನು
ಉಳಿಸುವುದು ಬಲು ಮುಖ್ಯ
ಕಳೆಯಂತೆ ಬರದಿರಲಿ ಜಂಭ ನಿನಗೆ
ಬೆಳೆಯುತಿರು ದಿನ ನಿತ್ಯ
ಗಳಿಸುತಿರು ಯಶವನ್ನು
ಕಳಕಳಿಯ ಹಾರೈಕೆ ಒಲವಿನೊಸಗೆ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

### ಪಾದರಕ್ಷೆಗಳ ಮೇಲೆ ನಿಮ್ಮ ಮತ್ತು ನನ್ನ ಚಿತ್ರವನ್ನು ಬಿಡಿಸಿದ ಚಮ್ಮಾವುಗೆಯನ್ನು ಅಣ್ಣನವರಿಗೆ ಅರ್ಪಿಸಿ ಒಂದು ಶರಣಾರ್ಥಿಯ ಭಾರ ಕಡಿಮೆ ಮಾಡಿಕೊಳ್ಳಬಹುದಲ್ಲವೇ?

# ಶರಣು ಶರಣಾರ್ಥಿ ಎನ್ನೋಣವೇ....

### ಇತರರನ್ನು ಸರಿಯಿಲ್ಲವೆಂದು ದೂರುವುದಕ್ಕಿಂತ ಮೊದಲು ನಾವು ಸರಿಯಾದ ದಾರಿಯಲ್ಲಿ ಸಾಗಬೇಕು. ಸದುವಿನಯ ನಮ್ಮಿಂದಲೇ ಆರಂಭವಾಗಬೇಕು

ಪ್ರಾಚೀನ ಕಾಲದಿಂದ ಇಂದಿನವರೆಗೆ ಭಾರತ ಅಖಂಡವಾಗಿ ಉಳಿದುಕೊಂಡು ಬರುವುದರಲ್ಲಿ ಇಲ್ಲಿನ ಅನೇಕ ವಿಭಿನ್ನ ಸಂಸ್ಕೃತಿಗಳ ಸಂಗಮವೇ ಮುಖ್ಯವಾದದ್ದು. ಅಂತಹ ಸಂಸ್ಕೃತಿಗಳಲ್ಲಿ ಶರಣ ಸಂಸ್ಕೃತಿಯು ಒಂದು. ವಿಕೃತ ಗೊಂಡಿರುವ ಪ್ರಕೃತಿಯನ್ನು ಸುಕೃತಿಗೊಳಿಸಲು ಸಮ ಸಮಾಜವನ್ನು ಕಟ್ಟಲು ವಿದೇಶಿ ಸಂಸ್ಕೃತಿಯ ಮೋಹದ ಪೊರೆಯನ್ನು ಕಳಚಿ ಪುನಃ ಶರಣ ಸಂಸ್ಕೃತಿಯ ಸಂಸ್ಕೃತಿಯನ್ನು ನಿರ್ಮಿಸಬೇಕಿದೆ. ಮನುಷ್ಯ ಮನುಷ್ಯನನ್ನಾಗಿ ನೋಡುವುದು ಸಹಜ. ಆದರೆ ಶರಣ ಸಂಸ್ಕೃತಿಯಲ್ಲಿ ಮನುಷ್ಯನನ್ನು ಮಹದೇವನನ್ನಾಗಿ ನೋಡುವ ಪರಿಕಲ್ಪನೆ ಇದೆ. ಭಕ್ತರಲ್ಲಿ ಭಗವಂತನನ್ನು ಕಾಣುವುದೇ ಶರಣರ ಮೂಲ ಮಂತ್ರ. ಯಾವ ಮಗ್ಗುಲಿನಿಂದ ನೋಡಿದರೂ ಶರಣ ಸಂಸ್ಕೃತಿ ಬೆಲ್ಲದ ಅಚ್ಚಿನಂತೆ. ಮನುಷ್ಯ ತನ್ನ ಬದುಕಿನಲ್ಲಿ ಮೃದು ವಚನಗಳನ್ನು ಸದುವಿನಯವನ್ನು ಅಳವಡಿಸಿಕೊಂಡಾಗ ಮಾತ್ರ ಸಂಸ್ಕೃತಿ ಸಾರ್ಥಕವಾಗುವುದು. ಬಸವಣ್ಣನವರ ಒಂದು ವಚನದಲ್ಲಿ

**ಕಂಡ ಭಕ್ತರಿಗೆ ಕೈಮುಗಿವಾತನೆ ಭಕ್ತ**
**ಮೃದು ವಚನವೇ ಸಕಲ ಜಪಂಗಳಯ್ಯ**
**ಮೃದುವಚನವೇ ಸಕಲ ತಪಂಗಳಯ್ಯ**
**ಸದುವಿನಯವೇ ಸದಾಶಿವನ ಒಲುಮೆಯಯ್ಯಾ**
**ಕೂಡಲಸಂಗಯ್ಯನಂತಲ್ಲದೊಲ್ಲನಯ್ಯ**



ರೇಖಾ ಪಾಟೀಲ
ಲೇಖಕಿ, ರಾಯಚೂರು

Scan For Digital Colourful
HAMPI TIMES E-paper

ಶರಣ ಸಂಸ್ಕೃತಿಯನ್ನು ಬಯಸುವವರು ಮೊದಲು ಮೃದು ವಚನವನ್ನು ಸದುವಿನಯವನ್ನು ರೂಡಿಸಿಕೊಳ್ಳ ಬೇಕು. ಗುರು ಹಿರಿಯರಿಗೆ ತಲೆಬಾಗಬೇಕು. ತಾಳ್ಮೆ ಸಹನೆಯಿಂದ ಪರಿಸ್ಥಿತಿಯನ್ನು ಅರಿತು ಮಾತನಾಡು ವುದು ಅವಶ್ಯಕವಾಗಿದೆ. ಮಾತು ಇಂದು ಖಡ್ಗದಂತೆ ಹರಿತವಾಗಿ ಮನಸ್ಸುಗಳನ್ನು ಒಡೆಯುತ್ತಿದೆ. ಮೃದು ಸಕಲರಿಗೂ ಒಳಿತು. ಎನಗಿಂತ ಕಿರಿಯರಿಲ್ಲ ಎಂದು ಬಸವಣ್ಣನವರು ವಿನಯದ ಸಾಕಾರ ಮೂರ್ತಿ ಗಳಾಗಿದ್ದಾರೆ. ಸರಳತೆ ಯಿಂದಲೇ ಮಹಾಮಾನವರಾದವರು.

ಒಂದು ದಿನ ಮುಂಜಾನೆ ಕಾರ್ಯಾಗಾರದ ನಿಮಿತ್ತ ಬಸವಣ್ಣನವರು



## ವಚನೋತ್ಸಾಹ

ರಾಜಬೀದಿಯಲ್ಲಿ ಹೊರಟಿರುವಾಗ, ಕಾಯಕಕ್ಕೆ ಎಂದು ಹೊರಟ ಶರಣ ದಂಪತಿಗಳಾದ ಹರಳಯ್ಯ ಮತ್ತು ಲಿಂಗಮ್ಮ ಎದುರಾಗುತ್ತಾರೆ. ಶರಣ ದಂಪತಿಗಳು ಅಣ್ಣನವರಿಗೆ ಶರಣಾರ್ಥಿ ಎನ್ನುತ್ತಾರೆ. ಪ್ರತಿಯಾಗಿ ಬಸವಣ್ಣನವರು ಶರಣು ಶರಣಾರ್ಥಿ ಎಂದು ವಿನಯದಿಂದ ಕರಜೋಡಿಸುತ್ತಾರೆ. ಬಸವಣ್ಣನವರು ತಮ್ಮ ಕಾರ್ಯದ ಕಡೆಗೆ ಮುಖ ಮಾಡಿ ಹೊರಡುತ್ತಾರೆ ಇತ್ತ ಶರಣ ದಂಪತಿಗಳು ಕುಳಿತಲ್ಲಿಯೇ ಕುಸಿಯುತ್ತಾರೆ ನಾವು ಒಂದು ಶರಣಾರ್ಥಿ ಹೇಳಿದರೆ ಅದಕ್ಕೆ ಪ್ರತಿಯಾಗಿ ಅಣ್ಣನವರು ಎರಡು ಶರಣಾರ್ಥಿ ಹೇಳಬೇಕೇ? ಎಂದು ಒಳಗೊಳಗೆ ಮರುಗುತ್ತಾರೆ. ಈ ಭಾರವನ್ನು ಹೇಗಾದರೂ ಸರಿ ಕಡಿಮೆ ಮಾಡಿಕೊಳ್ಳಬೇಕೆಂದು ಅವರ ಮನಗಳು ಬಯಸುತ್ತವೆ. ಹರಳಯ್ಯನವರು ಕಲ್ಯಾಣದ ಶರಣರಲ್ಲಿ ಹರಳು ಇದ್ದಂತೆ. ದುಗುಡವನ್ನು ಕಳೆಯಲು ಪತ್ನಿ ಲಿಂಗಮ್ಮ ಒಂದು ಸಲಹೆ ನೀಡುತ್ತಾರೆ. ನಾವು ತಯಾರಿಸುವ ಪಾದರಕ್ಷೆಗಳ ಮೇಲೆ ನಿಮ್ಮ ಮತ್ತು ನನ್ನ ಚಿತ್ರವನ್ನು ಬಿಡಿಸಿದ ಚಮ್ಮಾವುಗೆಯನ್ನು ಅಣ್ಣನವರಿಗೆ ಅರ್ಪಿಸಿ ಒಂದು ಶರಣಾರ್ಥಿಯ ಭಾರ ಕಡಿಮೆ ಮಾಡಿಕೊಳ್ಳಬಹುದಲ್ಲ? ಎಂದು ತಿಳಿಸುತ್ತಾಳೆ. ಇಬ್ಬರು ದಂಪತಿಗಳು ಒಂದಾಗಿ ಚಮ್ಮಾವುಗೆಯನ್ನು ಭಕ್ತಿಯಿಂದ ಸಿದ್ಧಪಡಿಸಿ ಶಿರದ ಮೇಲೆ ಹೊತ್ತು ಮಹಾಮನೆಯ ಕಡೆಗೆ ನಡೆಯುತ್ತಾರೆ.

**ಎಲವೊ, ಎಲವೊ ಪಾಪಕರ್ಮವ ಮಾಡಿದವನೇ,**
**ಎಲವೊ ಎಲವೊ ಬ್ರಹ್ಮ ಹತ್ಯವ ಮಾಡಿದವನೇ,**
**ಒಮ್ಮೆ ಶರಣೆನ್ನೆಲವೋ!**
**ಒಮ್ಮೆ ಶರಣೆಂದರೆ ಪಾಪಕರ್ಮ ಓಡುವುವು**
**ಸರ್ವ ಪ್ರಾಯಶ್ಚಿತಕ್ಕೆ ಹೊನ್ನ ಪರ್ವತಂಗಳೈದವು:**
**ಒಬ್ಬಗೆ ಶರಣೆನ್ನುವ ನಮ್ಮ ಕೂಡಲಸಂಗಮದೇವಂಗೆ!**

ನಮಸ್ಕಾರ, ನಮಸ್ತೆ, ಧನ್ಯವಾದ ಪದಗಳು ಇಂದು ವಾಡಿಕೆಯಲ್ಲಿವೆ. ಆದರೆ ನಮಸ್ಕಾರದ ಮಹತ್ವ ಇಂದು ಬಹುತೇಕ ತಮ್ಮ ತಪ್ಪುಗಳಿಂದ ಅವ್ಯವಹಾರಗಳಿಂದ ನುಣುಚಿಕೊಳ್ಳಲು ನಮಸ್ಕರಿಸುವ ವ್ಯಂಗ್ಯ ಪರಂಪರೆ ಬೆಳದಿದೆ. ಬಹುತೇಕ ಕಾರ್ಯನಿರ್ವಹಿಸುವ ಎಲ್ಲಾ ಕ್ಷೇತ್ರಗಳಲ್ಲಿ ಅವರವರ ಸ್ಥಾನಮಾನಕ್ಕೆ ತಕ್ಕಂತೆ ಎಲ್ಲರೂ ನಮಸ್ಕರಿಸಬೇಕು ಎನ್ನುವ ಮನೋಭಾವ ಹೆಚ್ಚಾಗಿದೆ. ಮನಸ್ಸಿನಿಂದ ತಲೆಬಾಗದಿದ್ದರೂ ವ್ಯಕ್ತಿಗಿಂತ ಕುರ್ಚಿಗೆ ನಮಸ್ಕರಿಸುವುದು ಅನಿವಾರ್ಯವಾಗಿದೆ. ನಮಸ್ಕಾರ ಪದದಲ್ಲಿ ಸೌಜನ್ಯವಿಲ್ಲ ಭಕ್ತಿ ಇಲ್ಲ ಗೌರವ ಭಾವವಿಲ್ಲ. ಶರಣ ಸಂಸ್ಕೃತಿಯ ಶರಣು ಶರಣಾರ್ಥಿ ಎನ್ನುವ ಭಾವಕ್ಕೆ ಬಹಳ ತೂಕವಿದೆ ಸಂಪೂರ್ಣ ಸಮರ್ಪಣಾ ಭಾವವಿದೆ. ನಿರಹಂಭಾವವಿದೆ. ಇಲ್ಲಿ ಬಸವಣ್ಣನವರು ಮತ್ತು ಹರಳಯ್ಯ ದಂಪತಿಗಳು ಅನುಸರಿಸಿದರೆ ಕ್ರಮ ಆದರ್ಶ ವಾಗಿದೆ.

**ಕರಣೆಂದರೆ ದುರಿತಗಳು ಓಟ**
**ಶರಣೆಂದರೆ ಅಂಗಗುಣಗಳ ಅಳಿವು**
**ಶರಣೆಂದರೆ ಮಲತ್ರಯಗಳ ನಾಶ**
**ಶರಣೆಂದರೆ ತ್ರಿಕರಣಗಳ ಶುದ್ಧಿ**

ಬಸವಪ್ರಿಯ ಪ್ರಭುವಿನಲ್ಲಿ ಶರಣೆಂದು ಬದುಕುವುದೇ ನಿತ್ಯಮುಕ್ತಿ ನೋಡಾ ಇಂತಹ ಆರೋಗ್ಯಕರ ಚಿಂತನೆಗಳಿರುವ ಸಂಸ್ಕೃತಿ ಸಮಾಜವನ್ನು ಸದೃಢವಾಗಿಸುತ್ತದೆ. ಕಾಲ ಬದಲಾಗಿದೆ ಸಮಾಜ ಸರಿಯಿಲ್ಲ, ಇತರರನ್ನು ಸರಿಯಿಲ್ಲವೆಂದು ದೂರುವುದಕ್ಕಿಂತ ಮೊದಲು ನಾವು ಸರಿಯಾದ ದಾರಿಯಲ್ಲಿ ಸಾಗಬೇಕು. ಸದುವಿನಯ ನಮ್ಮಿಂದಲೇ ಆರಂಭವಾಗಬೇಕು. ಭವಿಷ್ಯದ ನಿರ್ಮಾತೃಗಳಾದ ಮಕ್ಕಳಿಗೆ ಮಾದರಿಯಾಗಬೇಕು. ವಿಶ್ವಕ್ಕೆ ಭಾರತ ಕಾಲಕಾಲಕ್ಕೂ ಸುಸಂಸ್ಕೃತಿಯ ನಾಡಾಗಿ ಕಂಗೊಳಿಸಬೇಕು.

# ಲೋಕ್ ಅದಾಲತ್‌ನಲ್ಲಿ ರಾಜಿ ಸಂಧಾನ

## ಪರಸ್ಪರ ನಂಬಿಕೆ, ವಿಶ್ವಾಸವಿದ್ದಾಗ ಉತ್ತಮ ಜೀವನ ಸಾಧ್ಯ

### ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ನ್ಯಾ.ಕೆ.ಜಿ.ಶಾಂತಿ ಹೇಳಿಕೆ



■ ಹಂಪಿ ಟೈಮ್ಸ್ ಬಳ್ಳಾರಿ

ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆ ಒಳಗೊಂಡು ಒಟ್ಟು 31 ನ್ಯಾಯಾಲಯಗಳಲ್ಲಿ ಶನಿವಾರ ರಾಷ್ಟ್ರೀಯ ಲೋಕ್ ಅದಾಲತ್ ಸುಸೂತ್ರವಾಗಿ ನಡೆದು, ವಿವಿಧ ವ್ಯಾಜ್ಯಗಳ ಪ್ರಕರಣಗಳು ವಿಲೇವಾರಿಯಾದವು.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಕೆ.ಜಿ.ಶಾಂತಿ ಅವರು ಖುದ್ದಾಗಿ ಪ್ರಕರಣಗಳ ವಿಲೇವಾರಿ ಮಾಡುವಲ್ಲಿ ಸಕ್ರಿಯವಾಗಿ ಪಾಲ್ಗೊಂಡು, ನಗರದ ತಾಳೂರು ರಸ್ತೆಯ ಜಿಲ್ಲಾ ನ್ಯಾಯಾಲಯದ ಸಂಕೀರ್ಣದಲ್ಲಿರುವ ಎಲ್ಲಾ ನ್ಯಾಯಾಲಯಗಳಲ್ಲಿ ನಡೆದ ಲೋಕ್–ಅದಾಲತ್‌ಗಳನ್ನು ವೀಕ್ಷಿಸಿದರು.

ಈ ವೇಳೆ ಮಾತನಾಡಿದ ಅವರು, ಸಾರ್ವಜನಿಕರು–ಕಕ್ಷಿದಾರರು ತಮ್ಮ ವ್ಯಾಜ್ಯಗಳನ್ನು ಪರಸ್ಪರ ರಾಜಿ ಸಂಧಾನದ ಮೂಲಕ ಇತ್ಯರ್ಥಗೊಳಿಸಿಕೊಳ್ಳುವುದು ಉತ್ತಮ ಜೀವನ ನಡೆಸಲು ಒಂದು ಸದಾವಕಾಶ ಎಂದು ತಿಳಿಸಿದರು.

ಕೌಟುಂಬಿಕ ನ್ಯಾಯಾಲಯದಲ್ಲಿ ನಡೆದ ಲೋಕ್–ಅದಾಲತ್‌ನಲ್ಲಿ ಗಂಡ–ಹೆಂಡತಿ ಪ್ರಕರಣ ಇತ್ಯರ್ಥದ ಸಂದರ್ಭದಲ್ಲಿ ಪರಸ್ಪರ ನಂಬಿಕೆ ಹಾಗೂ ವಿಶ್ವಾಸದಿಂದ ಇದ್ದಾಗ ಒಳ್ಳೆಯ ಜೀವನ ಸಾಧ್ಯವಾಗುತ್ತದೆ ಎಂದು ಹೇಳಿದರು.

ತ್ವರಿತ ನ್ಯಾಯಕ್ಕಾಗಿ ಕಕ್ಷಿದಾರರು ಮುತುವರ್ಜಿ ವಹಿಸಿಕೊಂಡು, "ರಾಷ್ಟ್ರೀಯ ಲೋಕ್ ಅದಾಲತ್"ನಲ್ಲಿ ಭಾಗವಹಿಸಿದರೆ ಬಾಕಿ ಇರುವ ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಬಗೆ ಹರಿಸಿಕೊಂಡು ಸಾಮರಸ್ಯ ಜೀವನ ನಡೆಸಬಹುದು ಎಂದರು. ವ್ಯಾಜ್ಯ ಪೂರ್ವ ಪ್ರಕರಣಗಳನ್ನು ರಾಜಿಗೆ ತೆಗೆದು ಕೊಂಡಿದ್ದು, ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ದೊರೆತಿದೆ. ನ್ಯಾಯಾಲಯದ ನ್ಯಾಯಾಧೀಶರು, ವಕೀಲರು, ಸಿಬ್ಬಂದಿ ಸೇರಿದಂತೆ ವಿವಿಧ ಇಲಾಖೆಯ ಸಹಕಾರ ದೊಂದಿಗೆ ಮುಂದಿನ ದಿನಮಾನಗಳಲ್ಲಿ ವ್ಯಾಜ್ಯಪೂರ್ವ ಪ್ರಕರಣಗಳನ್ನು ರಾಜಿ ಸಂಧಾ ನದ ಮೂಲಕ ಬಗೆಹರಿಸಲು ಕಾರ್ಯ ಪ್ರವೃತ್ತರಾಗುತ್ತಾರೆ ಎಂದರು.

ಅಖಂಡ ಜಿಲ್ಲೆಯ 31 ನ್ಯಾಯಾಲಯಗಳಲ್ಲಿ ಒಟ್ಟು 65,278 ಪ್ರಕರಣಗಳು ಬಾಕಿ ಇದ್ದು, ಅವುಗಳಲ್ಲಿ 12,828 ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಬಗೆಹರಿಸುವ ಸಲುವಾಗಿ ಗುರುತಿಸಲಾಗಿದ್ದು, ಅವುಗಳಲ್ಲಿ ಸುಮಾರು 8,300 ಪ್ರಕರಣಗಳು ಈಗಾಗಲೇ ರಾಜಿ ಸಂಧಾನದ ಮೂಲಕ ಮುಕ್ತಾಯವಾಗಿರುತ್ತವೆ. 3 ಲಕ್ಷಕ್ಕಿಂತ ಹೆಚ್ಚು ವ್ಯಾಜ್ಯ ಪೂರ್ವ ಪ್ರಕರಣಗಳು ಸಹ ಮುಕ್ತಾಯಗೊಂಡಿದ್ದು, ಈ ವರ್ಷದ ಕೊನೆಯ ಲೋಕ್– ಅದಾಲತ್ ಯಶಸ್ವಿಯಾಗಿದೆ. ಇದಕ್ಕೆ ಕಾರಣೀಭೂತರಾದ ನ್ಯಾಯಾಧೀಶರು, ವಕೀಲರು, ಕಕ್ಷಿದಾರರು ಮತ್ತು ಸರ್ಕಾರದ ಅಧಿಕಾರಿಗಳಿಗೆ ಅಭಿನಂದಿಸುತ್ತೇನೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯಾದ ರಾಜೇಶ್ ಎನ್. ಹೊಸಮನೆ ಅವರು ತಿಳಿಸಿದರು. ಈ ಸಂದರ್ಭದಲ್ಲಿ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರುಗಳು ಸೇರಿದಂತೆ ಇತರರು ಇದ್ದರು.

# ಅಂಕಗಳಿಸುವ ಯಂತ್ರಗಳಂತಾಗದೆ ಸೃಜನಶೀಲ ವ್ಯಕ್ತಿಗಳಾಗಿ

■ ಹಂಪಿ ಟೈಮ್ಸ್ ಕಂಪ್ಲಿ

ಮಕ್ಕಳು ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು ಎಂದು ಹೊಸಪೇಟೆ ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷ ಗೊಗ್ಗ ಚನ್ನಬಸವರಾಜ ಹೇಳಿದರು.

ಇಲ್ಲಿನ ವೀರಶೈವ ಸಂಘದ ಆವರಣದಲ್ಲಿ ಶಾರದಾ ಹಿಪ್ರಾ ಅನುದಾನಿತ ಶಾಲೆ, ಓದ್ನೋ ಜಡೆಮ್ಮ ಗುರುಸಿದ್ದಯ್ಯನವರ ಪ್ರೌಢಶಾಲೆ, ವಾಲಿಶೆಟ್ರು ಗಂಗಮ್ಮ ಗುರುಪಾದಪ್ಪ ಪೂರ್ವ ಪ್ರಾಥಮಿಕ ಶಾಲೆ, ಎಸ್.ಎಂ.ರುದ್ರಮ್ಮ ರುದ್ರಯ್ಯಸ್ವಾಮಿ ಆಂಗ್ಲ ಮಾಧ್ಯಮ ಹಿಪ್ರಾ ಶಾಲಾ ವಾರ್ಷಿಕೋತ್ಸವ, ಸಾಂಸ್ಕೃತಿಕ ಸಮಾರಂಭಕ್ಕೆ ಶುಕ್ರವಾರ ಚಾಲನೆ ನೀಡಿ



ಮಾತನಾಡಿದರು. ಶಿಕ್ಷಣದೊಂದಿಗೆ ಸಹೋದರತೆ, ಸಮಾನತೆ, ನೈತಿಕತೆ, ಪ್ರಮಾಣಿಕತೆ ಗುಣಗಳನ್ನು ಮಕ್ಕಳಿಗೆ ಕಲಿಸು ವಲ್ಲಿ ಶಿಕ್ಷಕರು ಜಾಗೃತಿ ತೋರಬೇಕು. ಮಕ್ಕಳು ಹೆಚ್ಚು ಅಂಕಗಳಿಸುವ ಯಂತ್ರ ಗಳಂತಾಗದೆ ಸೃಜನಶೀಲ ವ್ಯಕ್ತಿತ್ವವುಳ್ಳ ಪ್ರಜೆಗ ಳಾಗಿ ರೂಪುಗೊಳ್ಳಬೇಕು ಎಂದು ಹೇಳಿದರು.

ವೀರಶೈವ ಸಂಘದ ಅಧ್ಯಕ್ಷ ಪಿ. ಮೂಕಯ್ಯಸ್ವಾಮಿ, ಸಿಆರ್‌ಪಿ ಚಂದ್ರಯ್ಯ ಸೊಪ್ಪಿಮಠ, ಎಎಸ್ಐ ಬಸವರಾಜ, ಸಂಘದ ಮಾಜಿ ಅಧ್ಯಕ್ಷ ಎಸ್.ಎಸ್.ಎಂ.ಚನ್ನಯ್ಯಸ್ವಾಮಿ, ಮುಖ್ಯಶಿಕ್ಷಕರಾದ ತಿಪ್ಪಣ್ಣ, ಆರ್. ಬಸವರಾಜ, ವೀರಶೈವ ಸಮಾಜದ ಅರವಿ ಬಸವನಗೌಡ, ಇತರರಿದ್ದರು.

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

HAMPI TIMES MARGADARSHI

ಮನಸ್ಸು ಮಾಡು - ಕರ್ತವ್ಯ ನಿಷ್ಟನಾಗು - ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ನಿನ್ನ ಏಳಿಗೆಗೆ ನೀನೆ ಶಿಲ್ಪಿ

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಹಿಂದಿ

**10 ನೇ ತರಗತಿ** **ಹಿಂದಿ**

## कर्नाटक संपदा

### I . अनुरूपता :

1) गोमटेश्वर :श्रवणबेलगोला :: गोलगुंबज: ----- **( विजयपुरा )**
2) सर्. एम्. विश्वेशवरय्या : महान अभियंता :: डॉ .सी. वी. रामन : -------- **( महान वैज्ञानिक )**
3) कुवेंपु : ज्ञान पीठ से पुरस्कृत :: डॉ.सी. वी. रामन : ----**( भारत रत्न से पुरस्कृत )**
4) कावेरी : नदी :: जोग : --------- **(जलप्रपात )**
5) बेलूरू : शिल्पकला :: गोलगुंबज : ----- **( वास्तुकला )**
6) कर्नाटक : चंदन का आगर :: बेंगलूरू : -------- **( सिलिकाँन सिटी )**

### II . एक वाक्य में उत्तर लिखिए |

7) पश्चिमी घाट किसे कहते हैं ?

**उत्तर : दक्षिण से उत्तर के छोर तक फैली लंबी पर्वतमालाओं को** पश्चिमी घाट कहते हैं |

8) सेंट फिलोमिना चर्च किस नगर में है ?

**उत्तर :** सेंट फिलोमिना चर्च **मैसूर** नगर में है |

9) किस नगर को सिलिकाँन सिटी कहा जाता है ?

**उत्तर :बेंगलूरू** नगर को सिलिकाँन सिटी कहा जाता है |

10) विजयपुरा नगर का प्रमुख आकर्षक स्थान कौन-?सा है ?

**उत्तर :** विजयपुरा नगर का प्रमुख आकर्षक स्थान **गोलगुंबज** है |

11) अरबी समुद्र कर्नाटक की किस दिशा में है ?

**उत्तर :**अरबी समुद्र कर्नाटक की **पश्चिम दिशा** मे है |

12) कर्नाटक की दक्षिण दिशा में कौन- सी पर्वतमालाएँ शोभायमान है ?

**उत्तर :** कर्नाटक की दक्षिण दिशा में नीलगिरि की पर्वतमालाएँ शोभायमान है |

www.hampitimes.com - Hampi Times Margadarshi

### II.चार-पाँच वाक्यो में उत्तर लिखिए |

13)कर्नाटक की प्राकृतिक सौंदर्य का वर्णन कीजिए । ( 2015 April, 2019April )

* प्रकृतिमाता ने कर्नाटक राज्य को अपने हाथो से सँवारकर सुंदर और समृद्ध बनाया है ।
* कर्नाटक की प्राकृतिक सुषमा नयन मनोहर है ।
* पश्चिम में विशाल अरबी समुद्र लहराता है ।
* इसी प्रांत में दक्षिण से उत्तर के छोर तक फैली लंबी पर्वतमालावो को पश्चिमी घाट कहते है ।
* इन्ही घाटो का कुछ भाग सह्याद्रि कहलाता है ।
* दक्षिण मे नीलगिरि की पर्वतावलियाँ शोभायमान है ।

14) कर्नाटक की शिल्पकला का परिचय दिजिए । ( 2024 APRIL, JUNE )

* कर्नाटक की शिल्पकला अनोखी है ।
* बादामी, ऐहोले ,पट्टदकल्लु में जो मंदिर है, उनकी शिल्पकला अद्भूत है ।
* बेलूर, हलेबीडू, सोमनाथपुर के मंदिरों में जो मूर्तियाँ है, वे सजीव लगती हैं ।
* ये सुंदर मूर्तियाँ हमें रामायण, महाभारत, पुराणो की कहानियाँ सुनाती हैं ।
* श्रवणबेलगोला में 57 फुट ऊँची गोमटेश्वर की एकशिला प्रतिमा है, जो दुनिया को त्याग और शांती का संदेश दे रही है ।
* विजयपुरा के गोलगुंबज की व्हिस्परिंग गैलरी वास्तुकला का अद्वितीय दृष्टांत हैं |
* मैसूर का राजमहल कर्नाटक के वैभव का प्रतीक है ।
* प्राचीन सेंट फिलोमिना चर्च, जगनमोहन राजमहल का पुरातत्व वस्तु संग्रहालय अत्यंत आकर्षणीय है |

---

विलोम शब्द

| | |
|---|---|
| आदि x अनादि | सजीव x निर्जीव |
| सदाचार x दुराचार | आयात x निर्यात |

ಮುಂದುವರೆಯುವುದು ---------

ಮಾರ್ಗದರ್ಶಿ ಶಿಕ್ಷಕರು : ಹೆಚ್.ತುಕಾರಾಮ್ ನಾಯ್ಕ, ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಮಗಿಮಾವಿನಹಳ್ಳಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ







## ನಿತ್ಯ ಪಂಚಾಂಗ

ಮಾಸ: ಮಾರ್ಗಶೀರ । ಸಂವತ್ಸರ: ಕ್ರೋಧಿ

**15–12–2024 – ಭಾನುವಾರ**

| | |
|---|---|
| ತಿಥಿ | : ಹುಣ್ಣಿಮೆ |
| ಪಕ್ಷ | : ಶುಕ್ಲ |
| ನಕ್ಷತ್ರ | : ಮೃಗಶಿರ |
| ಯೋಗ | : ಶುಭ |
| ಕರಣ | : ಭವ |
| ಸೂರ್ಯೋದಯ | : 07:01:52 |
| ಸೂರ್ಯಾಸ್ತ | : 17:42:41 |
| ರಾಹು ಕಾಲ | : 16:23–17:43 |
| ಯಮಘಂಡ ಕಾಲ | : 12:22–13:42 |
| ಗುಳಿಕ ಕಾಲ | : 15:02–16:23 |



## ತುಂಗಭದ್ರಾ ನೀರಿನ ಮಟ್ಟ

ಶನಿವಾರ : 14–12–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1629.25 ಅಡಿ |
| ಒಳ ಹರಿವು | 3419 ಕ್ಯುಸೆಕ್ |
| ಹೊರ ಹರಿವು | 5828 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 91.274 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1591 ಅಡಿ |
| ಒಳ ಹರಿವು | 434 ಕ್ಯುಸೆಕ್ |
| ಹೊರ ಹರಿವು | 976 ಕ್ಯುಸೆಕ್ |
| ಸಾಮರ್ಥ್ಯ | 11.885 ಟಿಎಂಸಿ |

visit our website
www.hampitimes.com
epaper.hampitimes.com

ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ ಹೇಳಿಕೆ | 349 ವಿದ್ಯಾರ್ಥಿನಿಯರಿಗೆ ಎರಡೇ ಶೌಚಾಲಯ ಸಾಕಾಗುವುದಿಲ್ಲ

# ಗುರಿ ತಲುಪುವತನಕ ಛಲ ಬಿಡದಿರಿ

■ **ಹಂಪಿ ಟೈಮ್ಸ್ ಬಳ್ಳಾರಿ**

ಹೆಣ್ಣುಮಕ್ಕಳು ತಮ್ಮ ಉಜ್ವಲ ಭವಿಷ್ಯದ ನಿರ್ಮಾಣಕ್ಕಾಗಿ ಗುರಿಯನ್ನಿಟ್ಟುಕೊಂಡು ಮುನ್ನಡೆಯಬೇಕು. ಸಾಧನೆಯ ಗುರಿ ತಲುಪುವ ತನಕ ಛಲವನ್ನು ಬಿಡಬಾರದು ಎಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾದ ಡಾ.ನಾಗಲಕ್ಷ್ಮೀ ಚೌಧರಿ ಅವರು ವಿದ್ಯಾರ್ಥಿನಿಯರಿಗೆ ಕಿವಿ ಮಾತು ಹೇಳಿದರು.

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ವತಿಯಿಂದ ನಗರದ ರೇಡಿಯೋ ಪಾರ್ಕ್ ಹತ್ತಿರದ (ಡಯಟ್) ಮಹಿಳಾ ಪ್ರಥಮ ದರ್ಜೆ ಕಾಲೇಜಿಗನಲ್ಲಿ ಶುಕ್ರವಾರ ಏರ್ಪಡಿಸಿದ್ದ ಪ್ರಸಕ್ತ ಶೈಕ್ಷಣಿಕ ಸಾಲಿನ ಸಾಂಸ್ಕೃತಿಕ, ಕ್ರೀಡಾ, ಎನ್ ಎಸ್ ಎಸ್ ಯೂತ್ ರೆಡ್ ಕ್ರಾಸ್ ಮತ್ತು ವಿವಿಧ ಸಮಿತಿಗಳ ಉದ್ಘಾಟನೆ ಸಮಾರಂಭ ಹಾಗೂ ಬಿಎ, ಬಿಕಾಂ ಪ್ರಥಮ ವರ್ಷದ ವಿದ್ಯಾರ್ಥಿನಿಯರಿಗೆ ಸ್ವಾಗತ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ವಿದ್ಯಾರ್ಥಿನಿಯರು ಸಮಾಜದಲ್ಲಿ ಗುರುತಿಸಿಕೊಳ್ಳಲು ಗುಣಮಟ್ಟ ಶಿಕ್ಷಣ ಪಡೆದುಕೊಂಡು ವಿವಿಧ ವಿಷಯಗಳ ಅರಿವು ಹೊಂದಬೇಕು. ಎಲ್ಲಾ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದರೊಂದಿಗೆ ಯಶಸ್ಸು ಕಾಣಬೇಕು ಎಂದರು. ತಂದೆ–ತಾಯಂದಿರು ಮಕ್ಕಳ ಉಜ್ವಲ ಭವಿಷ್ಯ ಕಾಣಲು ಕಾತುರದಿಂದ ಕಾಯುತ್ತಿರುತ್ತಾರೆ. ಹಾಗಾಗಿ ವಿದ್ಯಾರ್ಥಿಗಳು ಅವರ ಕನುಸುಗಳನ್ನು ನನಸು ಮಾಡುವ ಆಶಾಭಾವನೆ ಹೊಂದಬೇಕು. ಸಮಾಜದಲ್ಲಿ ಉನ್ನತ ಸ್ಥಾನ ಹೊಂದಬೇಕು ಎಂದರು.

ಕಾಲೇಜಿನ ಆವರಣದಲ್ಲಿ ಭೇಟಿ ನೀಡಿ ಪರಿಶೀಲಿಸಿದ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರು, ಕಾಲೇಜಿನಲ್ಲಿ 349 ವಿದ್ಯಾರ್ಥಿನಿಯರಿಗೆ ಕೇವಲ ಎರಡೇ ಶೌಚಾಲಯ ಸಾಕಾಗುವುದಿಲ್ಲ. ವಿದ್ಯಾರ್ಥಿನಿಯರ ಸಂಖ್ಯಾನುಗುಣವಾಗಿ ಇನ್ನೂ ಕೆಲವು ಶೌಚಾಲಯಗಳ ಅವಶ್ಯಕತೆ ಇದ್ದು, ಮುಂಬರುವ ದಿನಗಳಲ್ಲಿ ಶೌಚಾಲಯ ನಿರ್ಮಿಸಿಕೊಡಲು ಜಿಲ್ಲಾಧಿಕಾರಿಗಳಿಗೆ ತಿಳಿಸಿದರು.



ಇದಕ್ಕೂ ಮುನ್ನ ಬಿಮ್ಸ್ ಆಸ್ಪತ್ರೆಗೆ ಭೇಟಿ ನೀಡಿ, ಅಲ್ಲಿನ ಸ್ಥಿತಿ–ಗತಿಗಳ ಬಗ್ಗೆ ಚರ್ಚಿಸಿ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು. ನಂತರ ಬಾಣಂತಿಯರ ಸಮಸ್ಯೆ ಆಲಿಸಿದರು.

ಈ ಸಂದರ್ಭದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ವಿಜಯ್ ಕುಮಾರ್, ಜಿಲ್ಲಾಮಟ್ಟದ ಅಧಿಕಾರಿಗಳಾದ ಜಲಾಲಪ್ಪ, ಡಿಎಚ್ಒ ಡಾ.ಯಲ್ಲಾ ರಮೇಶ್ ಬಾಬು, ಕಾಲೇಜಿನ ನಿವೃತ್ತ ಪ್ರಾಂಶು ಪಾಲರಾದ ಡಾ.ಎಂ.ವೀರ ರಾಘ ವಲು, ಪ್ರಾಂಶುಪಾಲರಾದ ಡಾ.ಪ್ರಜ್ಞಾ ಕೆ.ವಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಪವಮಾನ ಹೋಮ ಮಾಲಾವಿಸರ್ಜನೆ



**ಮೊದಲ ಪುಟದಿಂದ**

ಹನುಮ ಮಾಲಾಧಾರಿಗಳಾಗಿ ವ್ರತವನ್ನು ಆಚರಿಸಿದರು.

ಮಾಲಾ ವಿಸರ್ಜನೆಗಾಗಿ ನೂರಾರು ಮಾಲಾಧಾರಿಗಳು ಪಾದಯಾತ್ರೆಯ ಮೂಲಕ ಅಂಜನಾದ್ರಿಗೆ ತೆರಳಿದರು. ವ್ರತದ ಕೊನೆಯದಿನ ಮಾಲಾವಿಸರ್ಜನೆಯ ಕಾರ್ಯಕ್ರಮದ ನಿಮಿತ್ತ ಶ್ರೀ ಆಂಜನೇಯಸ್ವಾಮಿಗೆ ವಿಶೇಷ ಅಲಂಕಾರಗಳು ಹಾಗು ದೇವಸ್ಥಾನದ ಪ್ರಾಂಗಣವನ್ನು ಹೂವಿನಿಂದ ಅಲಂಕರಿಸಲಾಗಿತ್ತು. ಶುಕ್ರವಾರದಂದು ಪಟ್ಟಣದ ಆರಾಧ್ಯದೈವದ ದೇವಸ್ಥಾನದಲ್ಲಿ ಪವಮಾನಹೋಮ, ಭಜನೆಗಳು ನಡೆದವು ನಂತರ ಹನುಮಮಾಲಾವಿಸರ್ಜನೆ ಮತ್ತು ಭಕ್ತಗಣಕ್ಕೆ ಪ್ರಸಾದವಿತರಣೆ ನಡೆಯಿತು.




# ತಿಂಡಿಗೆ ಬಂದ ತುಂಡೇರಾಯ

## ಕನ್ನಡ ವಿವಿಯಲ್ಲಿ ವಿಡಂಬನಾತ್ಮಕ ನಾಟಕ ಪ್ರದರ್ಶನ



■ **ಹಂಪಿ ಟೈಮ್ಸ್ ಹೊಸಪೇಟೆ**

ಕನ್ನಡ ವಿಶ್ವವಿದ್ಯಾಲಯದ ಶ್ರೀರಂಗ ದತ್ತಿನಿಧಿ ಮತ್ತು ನಾಟಕ ವಿಭಾಗದ ಆಶ್ರಯದಲ್ಲಿ ಶುಕ್ರವಾರ ಭುವನ ವಿಜಯ ಸಭಾಂಗಣದಲ್ಲಿ ಏರ್ಪಡಿಸಿದ್ದ ತಿಂಡಿಗೆ ಬಂದ ತುಂಡೇರಾಯ ನಾಟಕ ಪ್ರದರ್ಶನಕ್ಕೆ ಕನ್ನಡ ವಿಶ್ವವಿದ್ಯಾಲಯದ ಮಾನ್ಯ ಕುಲಪತಿ ಡಾ.ಡಿ.ವಿ. ಪರಮ ಶಿವಮೂರ್ತಿ ಅವರು ತಮಟೆ ಬಾರಿಸಿ ಚಾಲನೆ ನೀಡಿದರು.

ನಾಟಕ ವಿಭಾಗದ ಮುಖ್ಯಸ್ಥರು ಹಾಗೂ ಶ್ರೀರಂಗ ದತ್ತಿನಿಧಿಯ ಸಂಚಾಲಕರಾದ ಡಾ.ವೀರೇಶ ಬಡಿಗೇರ ಪ್ರಾಸ್ತಾವಿಕವಾಗಿ ಮಾತನಾಡಿ, ತಿಂಡಿಗೆ ಬಂದ ತುಂಡೇರಾಯ ಜರ್ಮನ್ ನಾಟಕಕಾರ ಬರ್ಟೋಲ್ಟ್ ಬ್ರೆಕ್ಟ್ ಅವರ `The resistible rise of Arthuro Ui' ನಾಟಕವನ್ನು ಆಧರಿಸಿದೆ. ಅದು ಎರಡನೇ ಪ್ರಪಂಚ ಯುದ್ಧಕ್ಕು ಮೊದಲು ಜರ್ಮನಿಯಲ್ಲಿ ಅಡಾಲ್ಫ್ ಹಿಟ್ಲರ್ ಮತ್ತು ನಾಝಿ ಪಕ್ಷದ ಬೆಳವಣಿಗೆಯ ಸಂಕೇತವಾಗಿ ಹುಟ್ಟಿದ ವಿಡಂಬನಾತ್ಮಕ ನಾಟಕ. ಆ ನಾಟಕದ ಎಲ್ಲ ಪಾತ್ರಗಳು ಹಾಗೂ ಘಟನೆಗಳು ನಾಝಿ ಜರ್ಮನಿಯ ಇತಿಹಾಸ ದಲ್ಲಿ ನಡೆದ ನೈಜ ಘಟನೆಗಳನ್ನು ಆಧರಿಸಿವೆ ಎಂದು ತಿಳಿಸಿದರು.

ಬೆಂಗಳೂರಿನ ನಿರ್ದಿಗಂತ ನಾಟಕ ತಂಡದ ಪ್ರದರ್ಶನದಲ್ಲಿ ಶಕೀರ್ ಅಹ್ಮದ್ ಅವರು – ನಾಟಕದ ನಿರ್ದೇಶನ, ಪರಿಕಲ್ಪನೆ ಮತ್ತು ವಿನ್ಯಾಸ ಮಾಡಿದ್ದರು. ಶ್ವೇತಾರಾಣಿ ಹೆಚ್.ಕೆ. ಅವರು – ರಂಗಸಜ್ಜಿಕೆ ಮತ್ತು ವಸ್ತ್ರ ವಿನ್ಯಾಸ, ಅನುಷ್ ಶೆಟ್ಟಿ, ಮುನ್ನಾ ಮೈಸೂರು ಇವರು – ಸಂಗೀತ, ಖಾಜುಗುತ್ತಲ – ಕಲೆ, ಮಂಜುನಾಥ ಹೆಚ್.ಸಿ. – ಬೆಳಕು ನಿರ್ವಹಿಸಿದ್ದರು. ಅಜಯ ಭಂಡಾರಿ – ತಾಂತ್ರಿಕ ಸಹಾಯಕರಾಗಿ, ಗಣೇಶ ಭೀಮನ ಕೋಣೆ – ನಿರ್ವಹಣೆ ಹೊತ್ತಿದ್ದರು. ರಂಗದಲ್ಲಿ ಸಿದ್ದಪ್ಪ ಮಾದರ, ಮಂಜುನಾಥ ವನಕೇರಿ, ಪಂಪನಗೌಡ ಸಿಂಧನೂರು, ಹನುಮಂತ ನಾಯ್ಕರ್, ಸಂಭ್ರಮ ಸೊನ್ನದ, ರೇಣುಕಾ ವೈಕೆ., ಗಣಪತಿಗೌಡ ಹೊನ್ನಾವರ, ಹನುಮಂತ ಜಿ.ಟಿ., ಯಲ್ಲಪ್ಪ ಹೆಳವರ, ಮುರಳಿಕೃಷ್ಣ ಭಜಂತ್ರಿ ಇವರು ಪಾತ್ರದಲ್ಲಿ ಹೊಕ್ಕು ಎಲ್ಲರನ್ನು ಸೂರೆಗೊಂಡರು.

ಲಲಿತಕಲಾ ನಿಕಾಯದ ಡೀನರಾದ ಡಾ. ಶಿವಾನಂದ ಎಸ್. ವಿರಕ್ತಮಠ, ಭಾಷಾ ನಿಕಾಯದ ಡೀನರಾದ ಡಾ.ಎಫ್.ಟಿ.ಹಳ್ಳಿಕೇರಿ ಹಾಗೂ ವಿಜ್ಞಾನ ನಿಕಾಯದ ಡೀನರಾದ ಡಾ.ಶೈಲಜಾ ಇಂ. ಹಿರೇಮಠ ಅವರು ಉಪಸ್ಥಿತರಿದ್ದರು. ಸಂಗೀತ ವಿಭಾಗದ ವಿದ್ಯಾರ್ಥಿ ಹರೀಶ್ ಭಂಡಾರಿ ನಿರೂಪಿಸಿದರು. ತಂಡದ ಕಲಾವಿದರನ್ನು ಕುಲಪತಿಯವರು ಗೌರವಿಸಿದರು.